www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 7 ಜುಲೈ 2013
Volume : IX Issue : VII July 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ವಯಸ್ಕರ ಸ್ವರ
3. ಪ್ರಾರ್ಥನಾ ಮನವಿಗಳು
4. ಪ್ರಶ್ನೋತ್ತರಗಳ ಸ್ವರ
5. ಸ್ಥಳೀಯ ಮತ್ತು ವಿದೇಶ ಸುದ್ದಿ
6. ಪ್ರಾರ್ಥನಾ ಸ್ವರ
7. ಅನಾಥರ ಸ್ವರ
8. ಬಿಡುಗಡೆಯ ಸುವಾರ್ತೆ ಮಹಿಮೆಯ ಸುವಾರ್ತೆ
9. ಅಸಾಧ್ಯವಾದದ್ದು ಒಂದೂ ಇಲ್ಲ
10. ಮಹಿಳೆಯರ ಸ್ವರ
11. ಯೌವನಸ್ಥರ ಸ್ವರ
12. ಆರೋಗ್ಯ ಸ್ವರ
13. ಜಾಹೀರಾತು
14. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸು ಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ ಹಾಗೂ ಸಹೋದರಿಯರಿಗೆ ವಂದನೆಗಳು.

ಈಗಾಗಲೇ ವರ್ಷದ ಅರ್ಧ ಭಾಗವನ್ನು ನಾವು ಮುಗಿಸಿರುತ್ತೇವೆ. ದಿನಗಳು ಓಡುವಂತದ್ದು ಗೋತ್ತೆ ಆಗುವುದಿಲ್ಲ. ಯೇಸುಕ್ರಿಸ್ತನ ಬರೋಣವು ಹತ್ತಿರವಾಗಿದೆ. ಅದಕ್ಕಾಗಿ ದೇವ ಜನರೆಲ್ಲ ಸಿದ್ಧವಾಗಬೇಕಾಗಿದೆ ಅನೇಕರನ್ನು ಸಿದ್ಧಪಡಿಸಬೇಕಾಗಿದೆ. ದೇವರ ಸ್ವರ ಮಾಸ ಪತ್ರಿಕೆಯ ಮೂಲಕ ಸಾವಿರಾರು ಜನರು ಆಶೀರ್ವಾದ ಹೊಂದಿದ್ದಾರೆಂದು ಹೇಳುವುದಕ್ಕೆ ಸಂತೋಷಪಡುತ್ತೇನೆ. ಈ ದೇವರ ಸ್ವರ ಮಾಸ ಪತ್ರಿಕೆಗಾಗಿ ಪ್ರತಿ ದಿವಸ ಪ್ರಾರ್ಥನೆ ಮಾಡಿರಿ. ಈ ದೇವರ ಸ್ವರ ಮಾಸ ಪತ್ರಿಕೆಯನ್ನು ಇನ್ನು ತಲುಪದಿರುವ ಸ್ಥಳಗಳಿಗೆ ತಲುಪಿಸಲು ಸಹಾಯ ಮಾಡಿ. ಕೆಲವೊಂದು ಜನರಿಗೆ ಸುವಾರ್ತೆ ಹೇಳಲು ಸಾಧ್ಯವಾಗದೇ ಇರಬಹುದು. ನಿಮಗೆ ಸಾಧ್ಯವಾದಲ್ಲಿ ಅವರ ವಿಳಾಸ ಕೊಟ್ಟು ಅವರ ಚಂದಾ ಹಣವನ್ನು ನೀವು ಭರಿಸಬಹುದು. **"ಆದದರಿಂದ, ನನ್ನ ಪ್ರಿಯ ಸಹೋದರರೇ, ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ ಇರ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ"**(1 ಕೊರಿ. 15:58). ಈ ದೇವರ ಸ್ವರ ಮಾಸಪತ್ರಿಕೆಯು ಒಬ್ಬೊಬ್ಬ ಸುರ್ವಾತಿಕನಿಗೆ ಸಮಾನವಾಗಿದೆ. ನಿಮಗೆ ಈ ಮಾಸ ಪತ್ರಿಕೆಯ ಮೂಲಕ ಉಂಟಾದ ಆಶೀರ್ವಾದವನ್ನು ನೀವು ನಮಗೆ ಪತ್ರದ ಮೂಲಕ ತಿಳಿಸಿದ್ದಲ್ಲಿ ಅದನ್ನು ಬರುವಂತಹ ದಿನಗಳಲ್ಲಿ ದೇವರ ಸ್ವರ ಮಾಸ ಪತ್ರಿಕೆಯಲ್ಲಿ ನಾವು ಪ್ರಕಟಿಸುತ್ತೇವೆ.

ಕರ್ತನಾದ ಯೇಸುಕ್ರಿಸ್ತನು ನಿಮ್ಮೆಲ್ಲರನ್ನು ಆಶೀರ್ವದಿಸಲಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಈ ಲೋಕದ ಯಾವುದೇ ಆಡಳಿತವು ಮನುಷ್ಯರನ್ನು ತೃಪ್ತಿ ಪಡಿಸುವದಿಲ್ಲ, ಜನರನ್ನು ಸಂತೋಷ ಪಡಿಸಲಾಗುವದಿಲ್ಲ, ಪ್ರತಿಯೊಂದು ಆಡಳಿತದಲ್ಲಿ ಜನರು ಕಣ್ಣೀರನ್ನು ಸುರಿಸಿದ್ದಾರೆ. ಪ್ರಧಾನ ಮನುಷ್ಯನಾದ ಆದಾಮನಿಗೆ ಒಂದೂ ದುಃಖ ಇಲ್ಲದ, ನೋವಿಲ್ಲದ, ಶಾಪವಿಲ್ಲದ ವೇದನೆ, ಕಣ್ಣೀರಿಲ್ಲದ ಅಧಿಕಾರ ನಡೆಸಲು ದೇವರು ಅವಕಾಶವನ್ನು ಕೊಟ್ಟನು. ಆದರೆ ಆದಾಮನ ಅವಿಧೆಯತೆಯಿಂದ ಅದನ್ನು ಕಳೆದುಕೊಂಡಾಗ ಅಂಥದೇ ಒಂದು ಒಳ್ಳೆಯ ಆಡಳಿತವನ್ನು ದೇವರ ಹೃದಯದಲ್ಲಿರುವ ಕಣ್ಣೀರು, ದುಃಖ, ಶಾಪ ರೋಗಗಳಿಲ್ಲದ ಆಡಳಿತವನ್ನು ದೇವರು ತನ್ನ ಮಾನವನ ಮೂಲಕವಾಗಿ ಈ ಲೋಕ್ಕಕೆ ಕೊಡಲು ಬಯಸಿದನು ಅದುವೇ ಸಾವಿರ ವರ್ಷಗಳ ಆಡಳಿತ ಮಿಲ್ಲೆನಿಯಂ ಆಗಿದೆ.

ಪ್ರಟ 20:4 "ತರುವಾಯ ಸಿಂಹಾಸನಗಳನ್ನು ಕಂಡೆನು ಅವುಗಳ ಮೇಲೆ ಜನರು ಕೂತಿದ್ದರು ನ್ಯಾಯ ತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆ ಹೋಯಿಸಿಕೊಂಡವರ ಆತ್ಮಗಳನ್ನು ಅದರ ಮೃಗಗೂ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತು ಹಾಕಿಸಿಕೊಳ್ಳದೆ ಇರುವವರನ್ನು ಕಂಡೆನು. ಅವರು ಜೀವಿತರಾಗಿ ಎದ್ದು ಸಾವಿರ ವರ್ಷ ಕ್ರಿಸ್ತನೊಂದಿಗೆ ಆಳಿದರು. ಪ್ರಕ 20:6. ಪ್ರಥಮ ಪುನರುತ್ಥಾನದಲ್ಲಿ ಸೇರಿರುವನು ಧನ್ಯನು, ಪರಿಶುದ್ಧನು ಆಗಿದ್ದಾನೆ ಇಂಥವರ ಮೇಲೆ ಎರಡನೇಯ ಮರಣಕ್ಕೆ ಅಧಿಕಾರವಿಲ್ಲ ಆದರೆ ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು.

ಸಂಕಟ ಕಾಲದ ಕೊನೆಯಲ್ಲಿ ಕ್ರಿಸ್ತನು ತನ್ನ ಮದಲಗಿತ್ತಿ ಸಭೆಯೊಡನೆ ಹೊಸ ರಾಜ್ಯವನ್ನು ಸ್ಥಾಪಿಸಲು ಪರಲೋಕದಿಂದ ಇಳಿದು ಬರುವನು ಹರ್ಮೆಗದೋನ್ ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಸೈತಾನನ್ನೂ, ಅವನ ಸೈನ್ಯವನ್ನು ಸೋಲಿಸಿ ಅಲ್ಲೆ ರಾಷ್ಟ್ರಗಳಿಗೆ (ಜನಾಂಗಗಳಿಗೆ) ತೀರ್ಪುಕೊಡುವಿ. ಈ ರೀತಿಯಲ್ಲಿ ಎಲ್ಲಾ ವಿರೋಧಿಗಳು ಕ್ರಿಸ್ತನಿಗೆ ಅಧೀನರಾಗುವಾಗ ಕ್ರೈಸ್ತಾಡಳಿತದ ಸಾವಿರ ವರುಷದ ಆಡಳಿತವು (Millennium) ಈ ಭೂಮಿಯಲ್ಲಿ ಸ್ಥಾಪಿಸಲ್ಪಡುತ್ತದೆ. ಸಾವಿರ ವರುಷ ಎಂಬುವುದಕ್ಕೆ ಆಂಗ್ಲ ಭಾಷೆಯಲ್ಲಿ ಮಿಲ್ಲೇನಿಯಂ ಎಂಬ ಪದವನ್ನು ಉಪಯೋಗಿಸಲಾಗಿದೆ. ಇದು ಲ್ಯಾಟಿನ್ ಭಾಷೆಯ ಶಬ್ಧವಾಗಿದೆ. ಮಿಲ್ಲೆ ಎಂದರೆ ಸಾವಿರ ಏನ್ನಸ್ಸ್ ಎಂದರೆ ವರುಷಗಳು ಈ ಪದಗಳ ಸಂಯೋಜನೆಯಿಂದಲೇ ಮಿಲ್ಲೇನಿಯಂ ಎಂಬ ಶಬ್ಧವು ಉಂಟಾಗಿರುವುದು.

ಸಾವಿರ ವರುಷಗಳ ಆಡಳಿತದ ಕಾಳ ಮಿತಿ (ಮಿಲ್ಲೆನಿಯಂ ಅವಧಿ) ಇದರ ಹೆಸರೇ ಸೂಚಿಸುವಂತೆ ಈ ಆಡಳಿತದ ಕಾಲಾವಧಿ ಸಾವರ ವರುಷಗಳಾಗಿರುತ್ತದೆ. ಇದಕ್ಕೆ ಆಧಾರವಾಗಿ ಪ್ರಟ 20:17 ವಾಕ್ಯಗಳಲ್ಲಿ ಆರು ಸಾರಿ ಸಾವಿರ ವರುಷಗಳೆಂಬ ಪದಗಳನ್ನು ಕಾಣಬಹುದು. ಸಾವಿರ ವರುಷದ ಆಡಳಿತ ಎಂಬುವುದೇ. ಈ ಭೂಮಿಯಲ್ಲಿ ಕ್ರಿಸ್ತನ ಅಧಿಕ ಸತ್ಯದಲ್ಲಿ ನಡೆಯುವ ಆಡಳಿತವಾಗಿರುತ್ತದೆ. ಈ ಆಡಳಿತ ಕೇವಲ ಸಾವಿರ ವರುಷಗಳಿಗೆ ಮಾತ್ರ ಮೀಸಲಾಗಿರುತ್ತದೆ. ಆದರೆ ಈ ಆಡಳಿತದ ನಂತರ ಸೈತಾನನು ಬಿಡುಗಡೆಯಾಗಿ (ಈ ಆಡಳಿತ ಆರಂಭವಾಗಿ ಸೈತಾನನು ಸಾವಿರ ವರ್ಷಕ್ಕಾಗಿ ಬಂಧಿಸಲ್ಪಟ್ಟು ಅಧೋಲೋಕದ ಸೆರೆಗೆ ತಳ್ಳಲ್ಪಟ್ಟನು. ಪ್ರಟ 20:1–3 ಆಗ ಒಬ್ಬ ದೇವ ದೂತನು ಅಧೋಲೋಕದ ಬೀಗದ ಕೈಯನ್ನು ದೊಡ್ಡ ಸರಪಣಿಯನ್ನು ಕೈಯಲ್ಲಿ ಹಿಡಿದು ಕೊಂಡು ಪರಲೋಕದಿಂದ ಇಳಿದು ಬರುವದನ್ನು ಕಂಡೆನು ಅವನು ಪಿಶಾಚನು, ಸೈತಾನನು ಇರುವ ಪುರಾತನ ಸರ್ಪವೆಂಬ ಘಟಸರ್ಪನನ್ನು ಹಿಡಿದು ಸಾವಿರ ವರ್ಷ ಬಂಧನದಲ್ಲಿ ಇಟ್ಟನು ಆ ಸಾವಿರ ವರ್ಷ ತೀರುವ ತನಕ ಸೈತಾನನು ಇನ್ನು ಜನರನ್ನು ಮರುಳು ಗೊಳ್ಳಿಸದ ಹಾಗೆ ದೇವದೂತನು ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಬಾಗಿಲು ಹಾಕಿದನು. ಆ ಸಾವಿರ ವರ್ಷಗಳಾದ ಮೇಲೆ ಅವನಿಗೆ ಸ್ವಲ್ಪ ಕಾಲ ಬಿಡುಗಡೆ ಯಾಗಬೇಕು ನಾಲ್ಕು ದಿಕ್ಕುಗಳಿಂದ ಜನರನ್ನು ಕೂಡಿಸಿ ಕ್ರಿಸ್ತನಿಗೆ ವಿರುದ್ಧವಾಗಿ ಯುದ್ಧ ಮಾಡುವನು. ಆಗ ಪರಲೋಕದಿಂದ ಬೆಂಕಿ ಇಳಿದು ಜನರನ್ನು ದಹಿಸಿ ಸೈತಾನನ್ನು ಬೆಂಕಿಗಂಧಕಗಳುರಿಯುವ ಕೆರೆಗೆ ದೊಬ್ಬಲ್ಪಟ್ಟನು. ಅಲ್ಲಿ ಸೈತಾನನು ನಿತ್ಯ ನಿತ್ಯಕ್ಕೂ ಯಾತನೆಯನ್ನು ಅನುಭವಿಸುವನು. ಪ್ರಕ 20:10 ಅದಾದ ನಂತರ ಬಿಳಿಸಿಂಹಾಸನದ ನ್ಯಾಯ ತೀರ್ಪು ಆದಿಕಾಂಡದಿಂದ ಪ್ರಕಟಣೆಯವರೆಗೆ ಸತ್ತಂತಹ ಅವಿಶ್ವಾಸಿಗಳಿಗಾಗಿ ಅದರ ನಂತರ ನೂತನ ಆಕಾಶ ನೂತನ ಭೂಮಿಯನ್ನು ಕರ್ತನು ಸೃಷ್ಟಿಸುವನು. ಅದರ ನಂತರ ಕ್ರಿಸ್ತನು

ನಾವು ಉಳಿದಿರುವದು ಯೆಹೋವನ ಕರುಣೆಯೇ; ಆತನ ಕೃಪಾವರಗಳು ನಿಂತುಹೋಗವು,
ದಿನದಿನವು ಹೊಸಹೊಸದಾಗಿ ಒದಗುತ್ತವೆ (ಪ್ರಲಾ. 3:22–23).

ನಿತ್ಯ ನಿತ್ಯಕ್ಕೂ ಆಡಳಿತ ನಡೆಸುವನು. ಇದೇ ಕರ್ತನಾದ ಯೇಸುಕ್ರಿಸ್ತನ ನಿತ್ಯವಾದ ರಾಜ್ಯ ನಿತ್ಯವಾದ ಆಡಳಿತ. (ಲೂಕ 1:33, 2 ಪೇತ್ರ 1:11.)

### ಕ್ರಿಸ್ತನೊಂದಿಗೆ ಆಡಳಿತ ನಡೆಸುವ ಬೇರೆಯವರು

ಸಾವಿರ ವರ್ಷದ ಆಡಳಿತದಲ್ಲಿ ಕರ್ತನಾದ ಯೇಸುಕ್ರಿಸ್ತನೊಂದಿಗೆ ದೇವಜನರು ಕೂಡ ಇರುತ್ತಾರೆ. ಯೆಶಾ. 32:1 ಇಗೋ ಒಬ್ಬ ರಾಜನು ನೀತಿಗನುಸಾರವಾಗಿ ಆಳುವನು. ಅಧಿಪತಿಗಳು ನ್ಯಾಯದಿಂದ ಧೊರೆತನ ಮಾಡುವರು. ಈ ಆಡಳಿತವನ್ನು ಸತ್ಯವೇದದ ವಿವಿಧ ವಾಕ್ಯಗಳ ಆಧಾರದಲ್ಲಿ ಈ ರೀತಿ ವಿಂಗಡಿಸಬಹುದು.

1) ಪ್ರಕ. 19:11 ಪರಲೋಕವು ತೆರೆದಿರುವುದನ್ನು ನಾನು ಕಂಡೆನು ಆಗ ಇಗೋ ಬಿಳಿ ಕುದುರೆಯು ನನಗೆ ಕಾಣಿಸಿತು ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು ಆತನು ನೀತಿಯಿಂದ ನ್ಯಾಯ ವಿಚಾರಿಸುತ್ತಾನೆ, ನೀತಿಯಿಂದ ಯುದ್ಧ ಮಾಡುತ್ತಾನೆ.

   ಪ್ರಕ. 19:16 ಆತನ ತೊಡೆಯ ಮೇಲಣ ವಸ್ತ್ರದಲ್ಲಿ ರಾಜಾಧಿರಾಜನೂ ಕರ್ತಾಧಿಕರ್ತನೂ ಎಂಬ ಹೆಸರು ಬರೆದಿದೆ. ಮೇಲಿನ ವಾಕ್ಯಗಳಿಂದ ನಾವು ತಿಳಿದುಕೊಳ್ಳುವುದೇನೆಂದರೆ ಕ್ರಿಸ್ತನು ರಾಜಾಧಿರಾಜಾನಾಗಿ, ಕರ್ತಾಧಿಕರ್ತನಾಗಿ ಮುಖ್ಯ ಆಡಳಿತಗಾರನಾಗಿರುತ್ತಾನೆ.

2) ಮತ್ತಾ. 19:28 ಯೇಸು ಅವರಿಗೆ ನಿಮಗೆ ಸತ್ಯವಾಗಿ ಹೇಳುತ್ತಾನೆ, ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ ನನ್ನನ್ನು ಹಿಂಬಾಲಿಸಿರುವ ನೀವು ಸಹ ಹನ್ನೆರಡು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವಿರಿ. ಕ್ರಿಸ್ತನ ಕೈಕೆಳಗೆ ಹನ್ನೆರಡು ಸಿಂಹಾಸನಗಳಲ್ಲಿ ಕುಳಿತು ಹನ್ನೆರಡು ಮಂದಿ ಶಿಷ್ಯರು ಆಳುವರು.

3) ಲೂಕ. 19:17 ಭಲಾ ನೀನು ಒಳ್ಳೆ ಆಳು ನೀನು ಬಹು ಸ್ವಲ್ಪವಾದದ್ದರಲ್ಲಿ ನಂಬಿಕೆಯುಳ್ಳವನಾಗಿದ್ದದರಿಂದ ಹತ್ತು ಗ್ರಾಮಗಳ ಮೇಲೆ ಅಧಿಕಾರಿಯಾಗಿರು ಎಂದು ಹೇಳಿದನು. ಶಿಷ್ಯರ ಕೈಕೆಳಗೆ ಹತ್ತು ಗ್ರಾಮಗಳ ಮೇಲೆ ಒಬ್ಬ ಅಧಿಕಾರಿಯಂತೆಯೂ ಇರುವರು.

### ಕ್ರಿಸ್ತನು ಮತ್ತು ಸಾವಿರ ವರ್ಷಗಳ ಆಡಳಿತದ ವಿಷಯ

ಕರ್ತನಾದ ಯೇಸುಕ್ರಿಸ್ತನಿಲ್ಲದೆ ಸಾವಿರ ವರ್ಷಗಳ ಆಡಳಿತ ಇಲ್ಲ. ಯಾಕಂದರೆ ಈ ಆಡಳಿತದ ಕೇಂದ್ರ ಬಿಂದು ಯೇಸುಕ್ರಿಸ್ತನಾಗಿದ್ದಾನೆ. ಕ್ರಿಸ್ತನು ಭೂಮಿಗೆ ಹಿಂತಿರುಗುವುದರೊಂದಿಗೆ ಈ ಆಡಳಿತವು ಆರಂಭಗೊಳ್ಳುತ್ತದೆ. ತನ್ನ ಮೂಲ ಪಿತೃವಾದ ದಾವೀದನ ಸಿಂಹಾಸನದಲ್ಲಿ ಈ ಲೋಕವನ್ನು ಆಳುವನು. ಜೆಕ. 14:9–10 ಯೆಹೋವನು ಭೂಲೋಕಕ್ಕೆಲ್ಲಾ ರಾಜನಾಗಿರುವನು. ಆ ದಿನದಲ್ಲಿ ಯೆಹೋವನೊಬ್ಬನೇ ದೇವರೆಂದೂ ಆತನ ಹೆಸರೊಂದೇ ಸ್ತುತ್ಯವೆಂದೂ ಎಲ್ಲರಿಗೂ ತಿಳಿದಿರುವುದು. ಆಗ ದೇಶವು ಶೆಬದಿಂದ ಯೆರೂಸಲೇಮಿಗೆ ತೆಂಕಲಲ್ಲಿರುವ ರಿಮ್ಮೋನಿನವರೆಗೆ ತಗ್ಗಾಗಿ ಮಾರ್ಪಡುವದು. ಯೆರೂಸಲೇಮೇ ಬೆನ್ಯಾಮೀನಿನ ಬಾಗಿಲಿಂದ ಪೂರ್ವಕಾಲದ ಬಾಗಿಲಿನ ಸ್ಥಳದವರೆಗೆ ಮೂಲೆಯ ಬಾಗಿಲಿನ ತನಕ ಹನನೇಲನ ಬುರುಜಿನಿಂದ ಅರಸನ ದ್ರಾಕ್ಷೆಯ ಅಲೆಗಳ ಪರಿಯಂತ ಇದ್ದ ಕಡೆಯೇ ಎತ್ತರದಲ್ಲಿ ನಿಂತಿರುವುದು. ಯೆರೆ. 23:5–6 ಯೆಹೋವನು ಹೀಗನ್ನುತ್ತಾನೆ, ಇಗೋ ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಕೆಯನ್ನು ಚಿಗುರಿಸುವೆನು. ಅವನು ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವನು. ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತರಾಗಿರುವನು. ಇಸ್ರಾಯೇಲರು ನೆಮ್ಮದಿಯಾಗಿ ವಾಸಿಸುವರು. ಯೆಹೋವ ಚಿದ್ಕೇನು ಅಂದರೆ ಯೆಹೋವನೇ ನಮ್ಮ ಸದ್ಧರ್ಮ ಎಂಬ ಹೆಸರು ಅವನಿಗಾಗುವುದು. ಇದಕ್ಕೆ ಮೆಸ್ಸಿಯನ ಆಡಳಿತವೆಂದು ದಾವೀದಕುಮಾರನಾದ ಕ್ರಿಸ್ತನ ಆಡಳಿತವೆಂದು ಕರೆಯುವರು. "ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ ಆತನಿಗೆ ಯೇಸುವೆಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿ ಕೊಳ್ಳುವನು. ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲ ಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು. ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು.

### ಹಳೆ ಒಡಂಬಡಿಕೆಯಲ್ಲಿ ಸಾವಿರ ವರುಷದ ಆಡಳಿತದ ಸೂಚನೆಗಳು

ಹಳೆ ಒಡಂಬಡಿಕೆಯಲ್ಲಿ ಸಾವಿರ ವರುಷದ ಆಡಳಿತದ ಕುರಿತು ಅನೇಕ ಸೂಚನೆಗಳನ್ನು ಕಾಣಬಹುದು.

1) ಈ ಅರಸನು ಯೆರೂಸಲೇಮನ್ನು ರಾಜಧಾನಿ ಯಾಗಿಟ್ಟುಕೊಂಡು ಸರ್ವಲೋಕವನ್ನು ಆಳುವನು. (ಯೆಶಾ. 62:1–8, ಅ.ಕೃ. 9:13, ಯೆಶಾ. 32:18, ಯೆಶಾ. 2:4).

2) ಈ ಆಡಳಿತವು ಪರಲೋಕ ಸ್ವಭಾವದಿಂದ ಕೂಡಿರುತ್ತದೆ (ಯೆಶಾ. 2:4).

3) ಸಮಾಧಾನ ಹಾಗೂ ನೀತಿಯಿಂದ ಕೂಡಿದ ಆಡಳಿತವಾಗಿರುತ್ತದೆ. ಈ ಆಡಳಿತದಲ್ಲಿ ಯುದ್ಧವಿರುವುದಿಲ್ಲ, ರೋಗವಿರುವುದಿಲ್ಲ, ಶಾಪವಿರುವುದಿಲ್ಲ, ಜನರು ದೀರ್ಘಾಯುಷ್ಯವುಳ್ಳವರಾಗಿರುತ್ತಾರೆ, ಭೂಮಿ

ನೀನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡ ಇರುವೆನು;
ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಣುಗಿಸವು (ಯೆಶಾ. 43:2).

ಫಲವತ್ತಾಗಿರುತ್ತದೆ, ಬರಗಾಲ ಇರುವುದಿಲ್ಲ, ವಾತಾವರಣ ಚೆನ್ನಾಗಿರುತ್ತದೆ, ಸಮೃದ್ಧಿ ಇರುತ್ತದೆ.

4) ಇದು ಯೆಹೋವನ ರಾಜ್ಯವಾಗಿರುತ್ತದೆ (2 ಪೂರ್ವ. 13:8).

5) ಈ ರಾಜ್ಯದ ಅರಸನನ್ನು ಇಮ್ಮಾನುವೇಲ್ ಎಂದು ಕರೆಯುತ್ತಾರೆ. ಯೆಶಾ. 7:14 ಈ ಅರಸನು ದೈವೀಕ ಹಾಗೂ ಮಾನುಷಿಕ ಸ್ವಭಾವವುಳ್ಳ ವ್ಯಕ್ತಿಯಾಗಿರುತ್ತಾನೆ. ಮನುಷ್ಯಕುಮಾರ, ದೇವಕುಮಾರ, ದಾವೀದನ ಮೊಗ್ಗು ಇನ್ನು ಮುಂತಾದ ಹೆಸರುಗಳಿಂದ ಕರೆಯಲ್ಪಡುವನು (ಯೆಶಾ. 9:6).

6) ಮೇಲಿನ ಘಟನೆಗಳೆಲ್ಲಾ ಅರಸನ ಆಗಮನದೊಂದಿಗೆ ನಡೆಯುತ್ತದೆ (ಧರ್ಮೋ. 30:3, ಕೀರ್ತ. 50:3–5).

7) ಎಲ್ಲಾ ಕಡೆಯೂ ಸಮಾಧಾನವಿರುತ್ತದೆ.

8) ಪಾಪ ಸ್ವಭಾವ ಇರಲ್ಲ, ಯಾಕಂದರೆ ಪಾಪಕ್ಕೆ ಪ್ರೇರೆಪಿಸುವ ಸೈತಾನನು ಸಾವಿರ ವರ್ಷಗಳಿಗಾಗಿ ಬಂಧಿಸಲ್ಪಟ್ಟಿದ್ದಾನೆ (ಪ್ರಕ. 20:1–2).

9) ಈಗ ಇರುವಂತೆ ಭ್ರಷ್ಟಚಾರ ಇರುವುದಿಲ್ಲ, ನೀತಿಯ ಆಡಳಿತವಿರುತ್ತದೆ (ಯೆಶಾ. 11:5–6).

10) ಜನರೆಲ್ಲರೂ ನೆಮ್ಮದಿಯಾಗಿ, ಸಂತೋಷವಾಗಿ ವಾಸವಾಗಿರುತ್ತಾರೆ.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಆತ್ಮೀಕ ಹೊದಿಕೆ

**ನೀವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಈಗಾಗಲೇ ಸೇವೆಮಾಡುತ್ತಿದ್ದೀರಿ. ಒಂದು ವೇಳೆ ನೀವು ಸ್ವತಂತ್ರ ಸೇವಕರಾಗಿದ್ದರೆ ಪಾ॥ ಸುನಿಲ್ ಜಾನ್ ಡಿ'ಸೋಜಾರವರ ಮೂಲಕ ಆತ್ಮೀಕ ಹೊದಿಕೆಯನ್ನು ಹೊಂದಬಹುದು.**

***ಹೊಂದಲು ಇಚ್ಛಿಸುವವರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9844550512, 9902334941, 08202002781**

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು (ಕೀರ್ತ. 37:4).

# ತೀರ್ಮಾನಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ವಯಸ್ಕರ ಸ್ವರ

**"ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುಕ್ರಿಸ್ತನನ್ನೇ ಹೊರತು ಯಾವುದನ್ನು ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು"**. ದೇವ ಮಗುವೆ ಈ ಲೋಕದಲ್ಲಿ ನಮ್ಮಲ್ಲಿ ನಾವು ಅನೇಕ ತೀರ್ಮಾಗಳನ್ನು ನಾವೇ ತೀರ್ಮಾನಿಸಿ ಜೀವಿಸುತ್ತೇವೆ. ಆದರೆ ನಾವು ಮಾಡಿದ ಎಷ್ಟೋ ತೀರ್ಮಾನಗಳಿಂದ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗುತ್ತೇವೆ. 1) ಪೌಲನ ತೀರ್ಮಾನ :– (1 ಕೊರಿ. 2:2). ಮೇಲಿನ ವಾಕ್ಯದಲ್ಲಿ ಅಪೋಸ್ತಲನಾದ ಪೌಲನ ತೀರ್ಮಾನವನ್ನು ಓದಿದೆವು. ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ಹೊರತು ಬೇರೆ ಯಾವುದನ್ನು ತಿಳಿಯದವನಾಗಿ ನಾನು ನಿಮ್ಮಲ್ಲಿರುವೆನು. ಕೆಲವೊಮ್ಮೆ ಎಷ್ಟೋ ವರ್ಷಗಳಿಂದ ಕ್ರೈಸ್ತರೆನಿಸಿಕೊಂಡರೂ ನಾವು ಯೇಸುವನ್ನು ತಿಳಿಯಬೇಕಾದ ರೀತಿಯಲ್ಲಿ ತಿಳಿದುಕೊಳ್ಳುವುದಿಲ್ಲ. ಬರೀ ರೋಗ ಸೌಖ್ಯತೆ, ಬಿಡುಗಡೆ, ಲೌಖಿಕ ಆಶೀರ್ವಾದಗಳಿಗಾಗಿ ಮಾತ್ರ ಯೇಸುವಿನ ಬಳಿ ಬರುತ್ತೇವೆ. ಹೊರತು ಶಿಲುಬೆಗೆ ಹಾಕಲ್ಪಟ್ಟು ಕ್ರಿಸ್ತನನ್ನು ನಾವು ತಿಳಿಯುವ ತೀರ್ಮಾನ ಮಾಡಲಾಗದೆ ಹೋಗುತ್ತೇವೆ.

ಪ್ರಿಯ ದೇವ ಮಗುವೆ ನೀನು ಇಂದು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ವಿಷಯದಲ್ಲಿ ತಿಳಿಯುವಾಗಲೇ ನಿನಗೆ ನಿಜವಾದ ಬಿಡುಗಡೆ. ಕೆಲವರಂತೂ ಆತ್ಮೀಕ ಜೀವಿತದಲ್ಲಿ ಅಲ್ಪ ಸ್ವಲ್ಪ ಹೋರಾಟ ಬರುವಾಗಲೇ ಸಹಿಸಿಕೊಳ್ಳದೆ ದೂಷಿಸಿ, ಹಿಂಜರಿದು ಹೋಗುವವರು. ಏಕೆಂದರೆ ಅವರ ತೀರ್ಮಾನಗಳು ದೃಢವಾಗಿರದ ಕಾರಣ ಇದು ಸಂಭವಿಸುವುದು. **"ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು"** (ಇಬ್ರಿ. 12:3). ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಪ್ರಕಟನೆಯು ನಿನಗಿರುವುದಾದರೆ ಖಂಡಿತವಾಗಿ ನೀನು ನಿನ್ನ ತೀರ್ಮಾದಲ್ಲಿ ದೃಢವಾಗುತ್ತಿಯ. ಪ್ರಸಿದ್ಧ ಸುವಾರ್ತಿಕರಾದ ಸಹೋ. ರಾಮ್‌ಬಾಬುರವರು ಯಾವಾಗಲೂ ತನ್ನ ಪ್ರಸಂಗದಲ್ಲಿ ಈ ರೀತಿ ಹೇಳುತ್ತಾರೆ, ಕ್ರಿಸ್ತನನ್ನು ಹಿಂಬಾಲಿಸಬೇಕಾದರೆ ಧಮ್ (ತಾಕತ್ತು) ಬೇಕು. ಪಾಪ ಬಿಟ್ಟು ಪರಿಶುದ್ಧ ಜೀವಿತ ಜೀವಿಸಬೇಕಾದರೆ ನಿನಗೆ ಧಮ್ ಬೇಕು. ಪಾಪ ಮಾಡಲು ಧಮ್ ಬೇಕಾಗಿಲ್ಲ. ಪರಿಶುದ್ಧ ಜೀವಿತ ಜೀವಿಸಿ ಸಾಕ್ಷಿಯಾಗಿ ಬಾಳಲು ಧಮ್ ಬೇಕು. ಪ್ರಿಯ ದೇವ ಮಗುವೆ ಕ್ರಿಸ್ತನಿಗಾಗಿ ಜೀವಿಸುವುದಾದರೆ ಸರಿಯಾಗಿ ಜೀವಿಸಬೇಕು. ಬರೀ ಹೆಸರಿಗೆ ಮಾತ್ರ ಕ್ರೈಸ್ತನಾಗಿರಬೇಡಾ. ಪೌಲನು ಹೇಳುತ್ತಾನೆ, "ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು (2 ಕೊರಿ. 5:15).

2) **ದಾನಿಯೇಲನ ತೀರ್ಮಾನ :** ದಾನಿಯೇಲನು ತಾನು ರಾಜನ ಬೋಜನ ಪದಾರ್ಥಗಳನ್ನೂ ತಾನು ಕುಡಿಯುವ ದ್ರಾಕ್ಷರಸವನ್ನೂ ಕುಡಿದು ತನ್ನನ್ನು ಅಶುದ್ಧ ಮಾಡಿಕೊಳ್ಳಬಾರದೆಂದು ನಿಶ್ಚಯಿಸಿಕೊಂಡನು (ದಾನಿ. 1:8). ರಾಜನ ಬೋಜನ ಹಾಗೂ ಪಾನ ತಿಂದು ಕುಡಿಯುವುದರಿಂದ ತಾನು ಅಶುದ್ಧನಾಗುವೆನು ಹಾಗೂ ದೇವರ ವಿರುದ್ಧವಾಗಿ ಕಾರ್ಯಮಾಡಬಾರದೆಂದು ನಿಶ್ಚಯಿಸಿ ಅದನ್ನು ಮಾಡದೆ ಪರಿಶುದ್ಧತೆ ಹೊಂದುವ ತೀರ್ಮಾನ ಮಾಡಿಕೊಂಡನು. ಪ್ರಿಯ ದೇವ ಮಗುವೆ ಇಂದು ದೇವರು ನಿನ್ನನ್ನು ತನಗೆಂದು ಪ್ರತ್ಯೇಕಿಸಿಕೊಂಡಿದ್ದಾನೆ (ಕೀರ್ತ. 4:3). ಲೋಕದೊಳಗಿನಿಂದ ನಿನ್ನನ್ನು ತನಗೆಂದು ಆರಿಸಿಕೊಂಡಿದ್ದಾನೆ (ಯೋಹಾ. 15:19). ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಇಜ್ಜೋಡಾಗಬೇಡ (2 ಕೊರಿ. 6:14). ಹೊರಟು ಬಂದು ಪ್ರತ್ಯೇಕವಾಗಿರು. ಅಶುದ್ಧವಾದ ಯಾವುದನ್ನು ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ (2 ಕೊರಿ. 6:17). ಪೌಲನು ಬರೆಯುತ್ತಾನೆ, "ಅವರು ಪ್ರಪಂಚದ ಕಾರ್ಯಗಳ ಮೇಲೆ ಮನಸ್ಸಿಡುವರು. ನಾವಾದರೋ ಪರಲೋಕ ಸಂಸ್ಥಾನದವರು (ಫಿಲಿಪ್ಪಿ. 3:19). ಇಂದು ಅನೇಕರು ಐಗುಪ್ತವನ್ನು ಬಿಡಲು ಮನಸ್ಸಿಲ್ಲದೆ ಒಂದು ಕಾಲು ಐಗುಪ್ತದಲ್ಲಿ ಇನ್ನೊಂದು ಕಾಲು ಪರಮ ಕಾನಾನ ಹೋಗುವುದಕ್ಕೆ ಪ್ರಯತ್ನಿಸುತ್ತಾರೆ. ಇದು ಸಾಧ್ಯನಾ? ಲೋಕವನ್ನು ಪ್ರೀತಿಸುವವನಿಗೆ ತಂದೆಯ ಮೇಲಣ ಪ್ರೀತಿ ಇರುವುದಿಲ್ಲ (1 ಯೋಹಾ. 2:16). ಇಸ್ರಾಯೇಲ್ಯರು ಸಂಪೂರ್ಣ ಕುಟುಂಬ, ದನಕುರಿಗಳೊಂದಿಗೆ ಐಗುಪ್ತವನ್ನು ಬಿಟ್ಟು ಹೋಗುವುದಕ್ಕೆ

ನನ್ನ ಧರ್ಮವನ್ನು ಹತ್ತಿರಕ್ಕೆ ಬರಮಾಡುವೆನು, ಅದು ಇನ್ನು ದೂರವಾಗಿರದು,
ನನ್ನ ರಕ್ಷಣೆಯು ತಡವಾಗದು (ಯೆಶಾ. 46:13).

ಫರೋಹನು ಅಪ್ಪಣೆ ಕೊಡಲಿಲ್ಲ. ಮೊದಲನೆಯದಾಗಿ ಆತ ಹೇಳುತ್ತಾನೆ, **"ನೀವು ಹೋಗಿ ಈ ದೇಶದೊಳಗೆ ನಿಮ್ಮ ದೇವರಿಗೆ ಯಜ್ಞಮಾಡಬಹುದು"** (ವಿಮೋ. 8:25). ಅದು ದೇವರಿಗೆ ಒಪ್ಪಿಗೆಯಿರಲಿಲ್ಲ ಮುಂದೆ ಭಾದೆ ವ್ಯಾಧಿಗಳು ಬಂದಾಗ ಫರೋಹನು ಎರಡನೆಯದಾಗಿ ಹೇಳುತ್ತಾನೆ, 'ನಿಮ್ಮಲ್ಲಿ ಗಂಡಸರು ಮಾತ್ರ ಹೋಗಿ ಆರಾಧಿಸಿಬರಬಹುದು' ದೇವರು ಹೇಳಿದ್ದು ಎಲ್ಲವೂ ಹೋಗುವುದಕ್ಕೆ ಅಪ್ಪಣೆ. ಆಗ ಫರೋಹನು ಹೇಳುವ ಮಾತನ್ನು ಸ್ವಲ್ಪ ಗಮನಿಸುವ **"ನೀವು ನಿಮ್ಮ ಮನೆಯವರೆಲ್ಲರನ್ನು ಕರೆದುಕೊಂಡು ಹೋಗಲು ಅಪ್ಪಣೆ ಎಂದಿಗೂ ಕೊಡುವುದಿಲ್ಲ. ಕೊಟ್ಟರೆ ಯೆಹೋವನ ದಯವು ನಿಮಗುಂಟಾಗುವುದು. ಗಂಡಸರು ಮಾತ್ರ ಹೋಗಿ ಆರಾಧಿಸಬಹುದು"** (ವಿಮೋ. 10:9–11).

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್.

---

## ಆಶ್ರಮದ ಅವಶ್ಯಕತೆಗಳು

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**9902334941, 08202002781, 09964070654.**

---

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

---

ನನ್ನ ನಾಮವನ್ನು ಅರಿತವನಾಗಿರುವದರಿಂದ ಅವನನ್ನು ಉದ್ಧರಿಸುವೆನು

(ಕೀರ್ತ. 91:14).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ವಿಶೇಷ ಸೂಚನೆ :

**ಜುಲೈ 2013 17 ರಿಂದ 20ರವರೆಗೆ ನಡೆಸಲ್ಪಡಬೇಕಾಗಿದ್ದ 4 ದಿನದ ಯೂತ್ ಪವರ್ ಕಾನ್ಫರೆನ್ಸ್ ಕೂಟವನ್ನು ಮುಂದೂಡಲಾಗಿದೆ.**

## ಪ್ರಾರ್ಥನಾ ಮನವಿಗಳು

- ವಿಶ್ವಾಸದಮನೆ ಸೇವೆಗಾಗಿ ಮತ್ತು ದೇವರ ಸ್ವರ ಮಾಸ ಪತ್ರಿಕೆಯ ಸೇವೆಗಾಗಿ ಪ್ರಾಥಿಸೋಣ.
- ನಮ್ಮ ಭಾರತ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಸೇವೆಮಾಡುವಂತಹ ಪ್ರತಿಯೊಂದು ಸೇವಕರುಗಳಿಗಾಗಿ ಪ್ರಾಥಿಸೋಣ.
- ದೇವಸೇವಕರನ್ನು, ಸಭೆಯ ವಿಶ್ವಾಸಿಗಳನ್ನು ಕರ್ತನು ಅಕಾಲಿಕ ಮರಣದಿಂದ ತಪ್ಪಿಸಿ ಆತನ ಸೇವೆಮಾಡಲು ಆಯಸ್ಸು ಮತ್ತು ಆರೋಗ್ಯವನ್ನು ದಯಪಾಲಿಸುವಂತೆ ಪ್ರಾರ್ಥಿಸಿರಿ.
- ಸಭೆಯ ಸೇವಕರು, ಮತ್ತು ಸಭೆಯ ವಿಶ್ವಾಸಿಗಳು ಕೊನೆವರೆಗೂ ರಕ್ಷಣೆಯಲ್ಲಿ ಸ್ಥಿರವಾಗಿ ನಿಲ್ಲಲು ಕರ್ತನು ಸಹಾಯಮಾಡುವಂತೆ ಪ್ರಾರ್ಥಿಸಿರಿ.
- ಯಾವುದೇ ಅಂಟುರೋಗಗಳು ಬಾರದಂತೆ ಪ್ರಾರ್ಥಿಸಿರಿ.
- ಒಳ್ಳೆಯ ವಾತಾವರಣಕ್ಕಾಗಿ ಪ್ರಾರ್ಥಿಸಿರಿ.
- ನಮ್ಮ ರಾಜ್ಯದಲ್ಲಿ ಮತ್ತು ದೇಶದಲ್ಲಿ ಉತ್ತಮ ಮಳೆ ಬೆಳೆ ಆಗುವಂತೆ ಯಾವುದೇ ಹಾನಿಗಳು ಉಂಟಾಗದಂತೆ ಪ್ರಾರ್ಥಿಸಿರಿ.
- ನೀರಿನ ಕೊರತೆ, ವಿದ್ಯುತ್‌ಶ್ಚಕ್ತಿಯ ಕೊರತೆ, ಬರಗಾಲ, ಭ್ರಷ್ಟಚಾರಗಳು ನೀಗುವಂತೆ ದೇಶದಲ್ಲಿ ಶಾಂತಿ ಸಮಾಧಾನ ನೆಲೆಸುವಂತೆ ಪ್ರಾರ್ಥಿಸಿರಿ.

ನಿನ್ನ ಜೀವಮಾನವೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು

(ಯೆಹೋ. 1:5).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅದಕಾರಣ ನಾವು ಉಪವಾಸ ಪ್ರಾರ್ಥನೆ ಮಾಡುವಾಗ ರಸ್ತೆಯಲ್ಲಿ ಅಲೆದಾಡುವ ವ್ಯಕ್ತಿಗಳನ್ನು ಕರೆದು ಅಥವಾ ಬಡವರನ್ನು ಕರೆದು ಅವರಿಗೆ ಊಟವನ್ನು ಕೊಡಬೇಕು ಇದರಿಂದ ನಮ್ಮ ಉಪವಾಸ ಪ್ರಾರ್ಥನೆಯನ್ನು ಮೆಚ್ಚಿ ಆಶೀರ್ವಾದಿಸುತ್ತನೆ.

1) **ಬೆತ್ತಲೆಯವರನ್ನು ಕಂಡಾಗ ಅವರಿಗೆಲ್ಲಾ ಹೊದಿಸುವುದು (ಯೆಶಾ. 58:7)**: ಒಂದು ದಿನ ಮಾರ್ಟಿನ ಲೂಥರ್ ಹೊಸ ವರುಷದ ರಾತ್ರಿ ಪ್ರಾರ್ಥನೆಯನ್ನು ಮುಗಿಸಿ ಮನೆಗೆ ಬರುತ್ತಿದ್ದರು. ಆಗ ಸಹಿಸಲಾರದ ಚಳಿಯ ದಿವಸವಾಗಿತ್ತು. ಆಗ ಒಬ್ಬ ಭಿಕ್ಷುಕನು ಶರೀರದಲ್ಲಿ ವಸ್ತ್ರಗಳಿಲ್ಲದೆ, ಹೊದಿಕೆಗಳಿಲ್ಲದೆ ಒಂದು ಮೂಲೆಯಲ್ಲಿ ಕೂತು ಚಳಿಯಲ್ಲಿ ನಡುಗುತ್ತಿದ್ದನು. ಇದನ್ನು ನೋಡಿದಂತಹ ಮಾರ್ಟಿನ್ ಲೂಥರ್‌ನವರು ಹಿಂದೆ ಮುಂದೆ ನೋಡದೆ ತಾನು ತೊಟ್ಟಂತ ಕೋಟನ್ನು ಬಿಚ್ಚಿ 2 ಭಾಗವಾಡಿ ಅರ್ಧ ಕೋಟನ್ನು ಒಬ್ಬನಿಗೆ ತೋಡಿಸಿದನು. ಮನೆಗೆ ಹೋಗಿ ಮಲಗಿದ ಮೇಲೆ ಕರ್ತನು ಅರ್ಧ ಕೋಟು ಧರಿಸಿದವನಾಗಿ ಕಾಣಿಸಿಕೊಂಡನು. ಆಗ ಮಾರ್ಟಿನ್ ಲೂಥರ್‌ರವರು ನಿರಾಶದಾರನಾಗಿ ತನ್ನ ಪೂರ್ಣ ಕೋಟನ್ನು ಭೀಕ್ಷುಕನಿಗೆ ತೊಡಿಸಲಿಲ್ಲವಲ್ಲಾ ಎಂದು ದು:ಖಪಟ್ಟರು. ಇಬ್ರಿ. 13:2 ವಚನ ಈ ರೀತಿ ಹೇಳುತ್ತದೆ, ಅತಿಥಿ ಸತ್ಕಾರ ಮಾಡುವುದನ್ನು ಮರೆಯಬೇಡಿ. ಅದನ್ನು ಮಾಡುವಲ್ಲಿ ಕೆಲವರು ತಿಳಿಯದೆ ದೇವದೂತರನ್ನು ಸತ್ಕರಿಸಿದ್ದಾರೆ.

2) **ನಿನ್ನಂತೆ ನರನಾಗಿರುವ ಯಾವನಿಗೆ ಆಗಲಿ ಮುಖ ತಪ್ಪಿಸಿಕೊಳ್ಳದಿರುವುದು (ಯೆಶಾ. 58:7)**. ದು:ಖಕರವಾದ ವಿಷಯ ಏನೆಂದರೆ ಇಂದು ಅನೇಕರು ಉಪವಾಸ ಪ್ರಾರ್ಥನೆ ಮಾಡುತ್ತಾರೆ. ಕುಟುಂಬದಲ್ಲಿ ಯಾರ ಜೊತೆಯಲ್ಲೂ ಮಾತನಾಡುವುದಿಲ್ಲ, ನೆರೆಕರೆಯವರ ಜೊತೆಯಲ್ಲಿ ಮಾತನಾಡುವುದಿಲ್ಲ, ಸಹೋದ್ಯೋಗಿಗಳ ಜೊತೆಯಲ್ಲಿ ಮಾತನಾಡುವುದಿಲ್ಲ, ಸಹ ವಿಶ್ವಾಸಿಗಳೊಂದಿಗೆ ಮಾತನಾಡುವುದಿಲ್ಲ. ಯೆಶಾ. 58:4 ವಾಕ್ಯದಲ್ಲಿ ಕರ್ತನು ಹೇಳುತ್ತಾನೆ, ನೋಡಿರಿ ನಿಮ್ಮ ಉಪವಾಸದ ಫಲ ಏನೆಂದರೆ ವ್ಯಾಜ್ಯ ಕಲಹ, ಕೇಡಿನ ಮದ್ದು ಇವುಗಳೇ ನೀವು ಈಗ ಮಾಡುವ ಉಪವಾಸವು ನಿಮ್ಮ ಪ್ರಾರ್ಥನೆಯನ್ನು ಉನ್ನತಲೋಕಕ್ಕೆ ಮುಟ್ಟಿಸತಕ್ಕದ್ದಲ್ಲ. ಹೃದಯದಲ್ಲಿ ಕೋಪ ದ್ವೇಷಗಳನ್ನು ಇಟ್ಟು ಕೊಂಡು ಮಾಡುವಂತಹ ಉಪವಾಸ ಪ್ರಾರ್ಥನೆಯು ದೇವರಿಗೆ ಅಸಹ್ಯವಾಗಿದೆ. ಒಬ್ಬ ಸಭಾಪಾಲಕರನ್ನು ನೋಡಿದರೆ ಇನ್ನೊಂದು ಸಭಾಪಾಲಕರಿಗೆ ಆಗುವುದಿಲ್ಲ, ಒಂದು ಸಭೆ ವಿಶ್ವಾಸಿಯನ್ನು ಕಂಡರೆ ಇನ್ನೊಂದು ಸಭೆ ವಿಶ್ವಾಸಿಗೆ ಆಗುವುದಿಲ್ಲ. ನನಗೆ ಗೊತ್ತಿರುವಾಗ ಅನೇಕ ಸಭಾಪಾಲಕರು ತಮ್ಮ ಸಭೆ ವಿಶ್ವಾಸಿಗಳನ್ನು ಬೇರೆ ವಿಶ್ವಾಸಿಗಳೊಂದಿಗೆ ಬೆರೆಯಲು ಬಿಡುವುದಿಲ್ಲ. ಆಕಸ್ಮಾತ್ ತಮ್ಮ ಸಭೆಯ ವಿಶ್ವಾಸಿ ಇನ್ನೊಂದು ಸಭೆಯ ವಿಶ್ವಾಸಿಯ ಪರಿಚಯವಾಗುವುದಾದರೆ ಇನ್ನೊಂದು ಸಭೆಯ ವಿಶ್ವಾಸಿಯ ಮೇಲೆ ಆರೋಪ ಹೊರಿಸಿ ವಿಷವನ್ನು ಬಿತ್ತಿ ತಮ್ಮ ಸಭೆಯ ವಿಶ್ವಾಸಿಯನ್ನು ಇನ್ನೊಂದು ಸಭೆಯ ವಿಶ್ವಾಸಿಯಿಂದ ದೂರಮಾಡುತ್ತಾರೆ. ಇಂದು ನಾವು ದೇವರ ರಾಜ್ಯ ಕಟ್ಟುತ್ತಾ ಇದ್ದೇವೆಯೋ? ನಮ್ಮ ರಾಜ್ಯವನ್ನು ಕಟ್ಟುತ್ತಾ ಇದ್ದೇವೆಯೋ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ಉಪವಾಸ ಪ್ರಾರ್ಥನೆ ಮಾಡುವ ದೇವ ಸೇವಕರೆ, ದೇವಜನರೆ, ಇನ್ನೊಂದು ಸಭೆಯ ದೇವ ಸೇವಕರನ್ನು, ದೇವಜನರನ್ನು ಯಾಕೆ ನಮಗೆ ಗೌರವಿಸಲು, ಪ್ರೀತಿಸಲು ಆಗುತ್ತಿಲ್ಲ ಯಾಕೆ ? ಇನ್ನೊಂದು ಸಭೆಯ ದೇವ ಸೇವಕರನ್ನು, ದೇವಜನರನ್ನು ನೋಡುವಾಗ ಮುಖತಿರುಗಿಸಿಕೊಳ್ಳುತ್ತಾರೆ. ನಾನು ಗಲ್ಫ್ ರಾಷ್ಟ್ರಗಳಲ್ಲಿ ಸೇವೆಗೆ ಹೋದಾಗ ನನ್ನಲ್ಲಿ ದು:ಖಕರ ಅನುಭವ ಉಂಟಾಯಿತು. ಉಡುಪಿ, ಮಂಗಳೂರು ಹಾಗೂ ಭಾರತ ದೇಶದ ನಾನಾ ಭಾಗಗಳಲ್ಲಿ ಸೇವೆ ಸಲ್ಲಿಸುವಂತಹ ಕ್ರೈಸ್ತ ಸಂಸ್ಥೆಯೊಂದರ ಸೇವಕರು ಹಾಗೂ ವಿಶ್ವಾಸಿಗಳು ತುಂಬಾ ಕಠಿಣವಾಗಿ ನನ್ನಲ್ಲಿ ನಡೆದುಕೊಂಡರು. ನನಗೆ ವಿರುದ್ಧವಾಗಿ ತಪ್ಪಾಗಿ ಮಾತಾಡಿದರು. ನನಗೆ ಹೃದಯದಲ್ಲಿ ತುಂಬಾ ದು:ಖವುಂಟಾಯಿತು. ಕೆಲವೇ ಕೆಲವು ದಿವಸಗಳ ನಂತರ ಆ ಸಭೆಯ ವಿಶ್ವಾಸಿಗಳು ನನ್ನಲ್ಲಿ ಕ್ಷಮೆಕೇಳಿಕೊಂಡರು. ನಡೆದಂತಹ ವಿಷಯ ತಿಳಿಸಿದರು. ಉಡುಪಿ, ಮಂಗಳೂರಿನಲ್ಲಿರುವ ನಮ್ಮ ಸಭೆಯ ಸೇವಕರುಗಳಿಂದ ನಿಮಗೆ ವಿರುದ್ಧವಾಗಿ ಆರೋಪಿಸಿದ ವಿಷಯಗಳು ತಿಳಿದುಬಂದವು. ಈಗ ನಮಗೆ ತಿಳಿಯಿತು. ನಿಮ್ಮ ಮೇಲೆ ಇರುವ ಹೊಟ್ಟೆಕಿಚ್ಚಿನಿಂದ ಹೇಳಿದರು ಎಂದು ಗಲ್ಫಾನ್ ವಿಶ್ವಾಸಿಗಳು ತಿಳಿಸಿದರು. ಅಲ್ಲಿಯೇ ಆ ಸೇವಕರನ್ನು

> ಗಾಯಮಾಡುವವನೂ ಗಾಯಕಟ್ಟುವವನೂ ಆತನೇ; ಹೊಡೆಯುವ ಕೈಯೇ ವಾಸಿಮಾಡುತ್ತದೆ (ಯೋಬ. 5:18).

ಕ್ಷಮಿಸಿದೆನು ಇಂದಿಗೂ ಆ ಗಲ್ಫ್‌ನಲ್ಲಿರುವ ವಿಶ್ವಾಸಿಗಳೊಂದಿಗೆ ಪ್ರೀತಿಯಿದ್ದರೆ ಇವತ್ತು ನಿಜವಾದ ಮಾನಸಾಂತರ ಸೇವಕರಲ್ಲಿ ದೇವಜನರಲ್ಲಿ ಒಂದಾಗಬೇಕಾಗಿದೆ. ಒಂದು ಸಭೆ ಸೇವೆ ಬೆಳೆಯುವಾಗ ಸಂತೋಷಪಟ್ಟು ಆಶೀರ್ವಾದ ಮಾಡಬೇಕು. 1 ಕೊರಿ. 13:4–7 ಹೇಳುತ್ತದೆ, **"ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿ ಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ; ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ; ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ"** ಅದಕಾರಣ ಪರಸ್ಪರ ಕಚ್ಚಾಡುವುದನ್ನು ಬಿಟ್ಟು ಬಿಟ್ಟು ತಪ್ಪುಹೋರಿಸುವುದನ್ನು ಬಿಟ್ಟು ಬಿಟ್ಟು ಎಲ್ಲಾ ದೇವ ಸೇವಕರು, ದೇವಜನರು ಒಟ್ಟಾಗಿ ಸೇರಿ ದೇವರ ರಾಜ್ಯವನ್ನು ಕಟ್ಟುವವರಾಗಿರಬೇಕು. ಇಲ್ಲದಿದ್ದರೆ ಪ್ರೀತಿ ಹಾಗೂ ಐಕ್ಯತೆ ಎಂಬ ಪದ ಪೀಠದವರೆಗೆ ಮಾತ್ರ ಇರುತ್ತದೆ. ಅದು ಮುಂದುವರಿಯುವುದಿಲ್ಲ.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ಜಿಲ್ಲಾ ಉಸ್ತುವಾರಿಗಳು : ವಿಧಾನಮಂಡಲ ಅಧಿವೇಶನ ಶುರುವಾಗುವ ಮುನ್ನವೇ ಆಡಳಿತ ಸುಸೂತ್ರಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಜಿಲ್ಲೆಗಳಿಗೂ ಉಸ್ತುವಾರಿಗಳನ್ನಾಗಿ ಸಚಿವರನ್ನು ನೇಮಿಸಿದ್ದಾರೆ.

* ಭಾರತ ತನ್ನ ತೈಲ ಖರೀದಿಯನ್ನು ಗಣನೀಯವಾಗಿ ಕಡಿತಗೊಳಿಸಿದ್ದರಿಂದ ವಿಚಲಿತವಾಗಿರುವ ಇರಾನ್ ಹೊಸದಿಲ್ಲಿ ತನ್ನ ತೈಲ ಆಮದನ್ನು ಹೆಚ್ಚಿಸುವುದಕ್ಕೆ ಅನೇಕ ಕೊಡುಗೆಗಳನ್ನು ನೀಡಿದೆ. ಆಕರ್ಷಕ ಶರ್ತಗಳ ಮೇಲೆ ತೈಲ ಕ್ಷೇತ್ರಗಳ ನೀಡಿಕೆ, ಪಾಕಿಸ್ಥಾನವನ್ನು ತಪ್ಪಿಸಲು ಸಮುದ್ರ ಮೂಲಕ ತೈಲ ಕೊಳವೆಮಾರ್ಗ ಮತ್ತು ತೈಲ ಶುದ್ಧೀಕರಣ ಸ್ಥಾವರಗಳಿಗೆ ವಿಮೆ, ಈ ಕೊಡುಗೆಗಳಲ್ಲಿ ಸೇರಿವೆ.

* ಆಂಧ್ರಪ್ರದೇಶದಲ್ಲಿ ಬಿಸಿಲು ಉಂಟುಮಾಡಿರುವ ಅನಾಹುತ ನಿಧಾನವಾಗಿ ಬೆಳಕಿಗೆ ಬರುತ್ತಿದ್ದು, ಕಳೆದ 3 ದಿನಗಳಲ್ಲಿ 440ಕ್ಕೂ ಹೆಚ್ಚು ಜನ ಬಿಸಿಲಿನ ಹೊಡೆತಕ್ಕೆ ಬಲಿಯಾಗಿರುವ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ.

* ಸಿಗರೇಟ್ ನಿಷೇಧಕ್ಕೂ ಸರ್ಕಾರ ಬದ್ಧವಾಗಿದ್ದು ಸುಪ್ರೀಂ ಕೋರ್ಟ್ ಆದೇಶ ನೀಡಿದ ಮರುದಿನವೇ ಆ ಕೆಲಸ ಮಾಡುತ್ತೇವೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಹೇಳಿದರು.

* ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ಭರವಸೆಯ ಜತೆಗೆ ಹಿಂದಿನ ಸರಕಾರದ ಅವಧಿಯಲ್ಲಿ 'ಭ್ರಷ್ಟಾಚಾರದ ಹಗರಣಗಳಿಂದಾಗಿ ದೇಶದ ಎದುರು ಕರ್ನಾಟಕ ತಲೆ ತಗ್ಗಿಸುವಂತಾಯಿತು. ಸಾರ್ವಜನಿಕರ ಹಣ ಪೋಲಾಗಿ ಅಭಿವೃದ್ಧಿ ಚಟುವಟಿಕೆ ಸ್ಥಗಿತಗೊಂಡಿದೆ. ಇದರಿಂದಾಗಿ ರಾಜಕೀಯ ವ್ಯವಸ್ಥೆ ಬಗ್ಗೆ ಜನರ ವಿಶ್ವಾಸ ಹೋಗಿದೆ. ಇದನ್ನು ಹೋಗಲಾಡಿಸಿ, ಕರ್ನಾಟಕದ ಅಸ್ಥಿತೆಯನ್ನು ಪುನರ್ ಸ್ಥಾಪಿಸಲಾಗುವುದು ಎಂಬ ಮಾತನ್ನು ರಾಜ್ಯಪಾಲರ ಮೂಲಕ ಹೇಳಿಸಿರುವ ಸರಕಾರ ವಿಪಕ್ಷಗಳನ್ನು ನೇರವಾಗಿ ಎದುರುಹಾಕಿಕೊಂಡಿದೆ.

* ಏಕದಿನ ರ‍್ಯಾಂಕಿಂಗ್‌ನಲ್ಲಿ ನಂ.1 ಸ್ಥಾನ ಅಲಂಕರಿಸಿದ ಭಾರತದ ಸಾಧನೆಗಾಗಿ ನಾಯಕ ಮಹೇಂದ್ರ ಸಿಂಗ್ ಧೋನಿ ಐಸಿಸಿ ಶೀಲ್ಡ್ ಸ್ವೀಕರಿಸಿದರು. 2013 ಏಪ್ರಿಲ್ ಒಂದಕ್ಕೆ ಅನ್ವಯವಾಗುವ ರೀತಿಯಲ್ಲಿ ಟೀಮ್ ಇಂಡಿಯಾ ವಿಶ್ವದ ಅಗ್ರಮಾನ್ಯ ಏಕದಿನ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

* ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಅಡ್ಡಿಯಾಗುವ ಹಾಗೂ ಕರ್ತವ್ಯ ಲೋಪವೆಸಗುವ ಗ್ರಾಮ ಪಂಚಾಯತ್ ಅಧ್ಯಕ್ಷರು ಅಥವಾ ಸದಸ್ಯರನ್ನು ಅನರ್ಹಗೊಳಿಸಲು ಸಂಬಂಧಿಸಿದ ಕಾನೂನಿಗೆ ತಿದ್ದುಪಡಿ ತರುವುದಾಗಿ ರಾಜ್ಯ ಸರಕಾರ ಘೋಷಿಸಿದೆ.

ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು. ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ.
(ದಾನಿ. 9:23).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

# ಬಿಡುಗಡೆಯ ಸುವಾರ್ತೆ ಮಹಿಮೆಯ ಸುವಾರ್ತೆ

**ಕರ್ತನು ದೇವರಾತ್ಮನೆ:** ಕರ್ತನು ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು. ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ (2 ಕೊರಿ. 3:17–18).

ಈ ಸತ್ಯವೇದ ಭಾಗದಲ್ಲಿ ಹದಿನೇಳನೆ ವಚನದಲ್ಲಿ ದೇವರಾತ್ಮನು ನೀಡುವ ಬಿಡುಗಡೆಯ ಸುವಾರ್ತೆಯನ್ನು ನೋಡುತ್ತೇವೆ. ಎಲ್ಲಿ ದೇವರಾತ್ಮನು ಇರುವನೋ ಅಲ್ಲಿ ಬಿಡುಗಡೆ ಉಂಟು. ಅದೇ ವೇಳೆಯಲ್ಲಿ ಹದಿನೆಂಟನೆ ವಚನವನ್ನು ಓದಿ ನೋಡಿದರೆ, ಅಲ್ಲಿ ಮಹಿಮೆಯ ಸುವಾರ್ತೆಯನ್ನು ನೋಡುವೆವು. ಆತ್ಮನಾಗಿರುವ ಕರ್ತನಿಂದಲೇ ಆ ಸಾರೂಪ್ಯದಿಂದಲೇ ಮಹಿಮೆಯ ಮೇಲೆ ಮಹಿಮೆ ಹೊಂದಿ ರೂಪಾಂತರ ಹೊಂದುವೆವು.

ಯೇಸುಕ್ರಿಸ್ತನು ಬಿಡುಗಡೆಯ ಸುವಾರ್ತೆಯನ್ನೂ ತಂದನು. ಮಹಿಮೆಯ ಸುವಾರ್ತೆಯನ್ನೂ ತಂದನು. ಬಿಡುಗಡೆಯ ಸುವಾರ್ತೆಯಿಂದ ಮನುಷ್ಯನು ಪಾಪದ ಕೆಸರಿನಿಂದ ಹೊರಗೆ ಬರುವನು. ಅಂಧಕಾರ ಶಕ್ತಿಗಳಿಂದ ಬಿಡುಗಡೆ ಹೊಂದುವನು. ನರಕದಿಂದ ಬಿಡುಗಡೆ ಹೊಂದುವನು. ಮಹಿಮೆಯ ಸುವಾರ್ತೆಯಿಂದ ಮನುಷ್ಯನು ಪರಿಶುದ್ಧನಾಗಿ, ನೀತಿವಂತನಾಗಿ, ಪೂರ್ಣತೆಯನ್ನು ಹೊಂದಿ ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಸಾಗುವನು. ಯೇಸುಕ್ರಿಸ್ತನು ಈ ಭೂಮಿಗೆ ಬಂದ ಮೊದಲ ಉದ್ದೇಶ ಸೈತಾನನ ಅಧಿಪತ್ಯದಿಂದ ನಮ್ಮನ್ನು ಬಿಡುಗಡೆ ಮಾಡುವದಕ್ಕಾಗಿಯೇ ! ಪಾಪದ ದಾಸತ್ವದಿಂದಲೂ, ಶಾಪದ ಕಟ್ಟುಗಳಿಂದಲೂ, ವ್ಯಾಧಿಗಳಿಂದಲೂ, ಬಿಡುಗಡೆ ಮಾಡುವದಕ್ಕಾಗಿಯೇ ! ಆದ್ದರಿಂದಲೇ, ಮಾನಸಾಂತರಪಡಿರಿ. ಪರಲೋಕ ರಾಜ್ಯ ಸಮೀಪಿಸಿದೆ ಎಂದು ಆತನು ಬೋಧಿಸಿದನು. ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ. ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು (ಯೆಶಾ. 61:1). ಎಂದು ಕ್ರಿಸ್ತನ ಕುರಿತು ಪ್ರವಾದಿಯಾದ ಯೆಶಾಯನು ಪ್ರವಾದಿಸಿದನು. ಯೇಸುಕ್ರಿಸ್ತನು ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ (ಮಾರ್ಕ. 16:15). ಎಂದು ಹೇಳಿದನು. ಆದ್ದರಿಂದಲೇ ಆತನ ಶಿಷ್ಯರು ತಮ್ಮ ಪ್ರಾಣದ ಮೇಲಿನ ಹಂಗನ್ನು ತೊರೆದು ಎಲ್ಲಾ ಕಡೆಯಲ್ಲಿ ಸುವಾರ್ತೆ ಸಾರಿ ರಕ್ತಸಾಕ್ಷಿಗಳಾದರು. ಅಪೋ ಪೌಲನು ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೆಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲ ಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೂ ಮಾಡುವಂಥದ್ದಾಗಿದೆ (ರೋಮ. 1:15–16). ಎಂದು ಹೇಳುತ್ತಾನೆ.

ಸಾಮಾನ್ಯವಾಗಿ ಎಲ್ಲಾ ಸೌವಾರ್ತಿಕರು ಬಿಡುಗಡೆಯ ಸುವಾರ್ತೆಯನ್ನು ಬೋಧಿಸುವರು. ಯೇಸುಕ್ರಿಸ್ತನು ನಿಮ್ಮನ್ನು ಪ್ರೀತಿಸುವನು. ನಿಮ್ಮನ್ನು ರಕ್ಷಿಸುವನು, ವ್ಯಾಧಿಗಳನ್ನು ಗುಣಪಡಿಸುವನು, ಸಮಾಧಾನ ನೀಡುವನು. ನಿಜವಾದ ಸಂತೋಷ ಕೊಡುವನು ಎಂದೆಲ್ಲಾ ಸಂದೇಶಗಳನ್ನು ಹೇಳಿ ಅನ್ಯ ಜನರನ್ನು ಕರ್ತನ ಬಳಿ ತರುವರು. ಯೇಸುಕ್ರಿಸ್ತನು ಬಿಡುಗಡೆಯ ಸುವಾರ್ತೆಯನ್ನು ಮಾತ್ರವಲ್ಲ ಮಹಿಮೆಯ ಸುವಾರ್ತೆಯನ್ನು ನೀಡಿದನು. ಇದನ್ನು ಕುರಿತು 2 ಕೊರಿ. 4:4 ರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆ ಎಂದು ಹೇಳಲ್ಪಟ್ಟಿದೆ. ಹೌದು, ಮಹಿಮೆಯ ಸುವಾರ್ತೆ ಕ್ರಿಸ್ತನ ಬೆಳಕನ್ನು ಮನುಷ್ಯರೊಳಗೆ ತರುವದು. ಆ ಬೆಳಕು ಮನುಷ್ಯನನ್ನು ಪ್ರಕಾಶಿಸುವಂತೆ ಮಾಡುವದು. ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಸೇರಿಸುವದು.

ದೇವಮಕ್ಕಳು ಪಾಪದಿಂದ ಬಿಡುಗಡೆ ಹೊಂದುವದರಲ್ಲೇ ನಿಂತು ಬಿಡಬಾರದು. ಮಾನಸಾಂತರ ಎಂದು ಕೆಟ್ಟ ಮಗನ ಚರಿತ್ರೆಯನ್ನೇ ಜೀವಿತ ಕಾಲವೆಲ್ಲಾ ಪ್ರಸಂಗಿಸುತ್ತಲೇ ಇದ್ದರೆ, ಕ್ರಿಸ್ತನಂತೆ ಜಯಶಾಲಿಗಳಾಗಿ, ಆತನ ಸಾರೂಪ್ಯ ಪಡೆದು ಪ್ರಭಾವದಿಂದ ಅಧಿಕ ಪ್ರಭಾವದೊಳಗೆ ಸೇರುವದು ಯಾವಾಗ? ಯೇಸುಕ್ರಿಸ್ತನ ರಕ್ತ ನಿಮ್ಮನ್ನು ಪಾಪದಿಂದಲೂ, ಶಾಪದಿಂದಲೂ, ವ್ಯಾಧಿಯಿಂದಲೂ ಬಿಡುಗಡೆ ಮಾಡುವದು. ಇದು ಬಿಡುಗಡೆಯ ಸುವಾರ್ತೆ. ಆದರೆ ಕ್ರಿಸ್ತನಂತೆ ಮಾರ್ಪಟ್ಟು ಆತನ ಗುಣಾತಿಶಯುಗಳನ್ನು, ಸ್ವಭಾವವನ್ನೂ ಹೊಂದಿ ಪೂರ್ಣತೆಯೆಡೆಗೆ ಸಾಗುವದು ಮಹಿಮೆಯ ಸುವಾರ್ತೆ (ಯೋಹಾ. 10:10)ರಲ್ಲಿ ಯೇಸುಕ್ರಿಸ್ತನು ಹೇಳುವದನ್ನು ಸ್ವಲ್ಪ ಚಿಂತಿಸಿ ನೋಡಿರಿ. ಅಲ್ಲಿ ಕರ್ತನು ನಾನೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ

ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ (ವಿಮೋ. 14:13).

ಇರಬೇಕೆಂತಲೂ ಬಂದೆನು ಎಂದು ಹೇಳುತ್ತಾನೆ. ಇದರಲ್ಲಿ ಬಿಡುಗಡೆ ಹಾಗೂ ಮಹಿಮೆ ಎರಡೂ ಸುವಾರ್ತೆಗಳೂ ಇರುವವು. ಜೀವವಿರಬೇಕು ಎಂಬುದು ಬಿಡುಗಡೆಯ ಸುವಾರ್ತೆಯಾದರೆ ಅದು ಸಮೃದ್ಧಿಯಾಗಿರಬೇಕೆಂಬುದು ಮಹಿಮೆಯ ಸುವಾರ್ತೆಯಾಗಿದೆ. ಮರಣದೊಂದಿಗೆ ಹೋರಾಡುವ ಒಬ್ಬ ರೋಗಿಯು ಆಸ್ಪತ್ರೆಗೆ ಬಂದರೆ ಮೊದಲು ಅವನನ್ನು ಪ್ರಾಣಾಪಾಯದಿಂದ ಹೊರಕ್ಕೆ ತರುವ ಪ್ರಯತ್ನವನ್ನು ವೈದ್ಯರು ಮಾಡುವರು. ಅವನನ್ನು ಮರಣದ ಬಾಯಿಂದ ಪಾರು ಮಾಡಿದ ಮೇಲೆ ಅವನು ಚೇತರಿಸಿಕೊಂಡು ಆರೋಗ್ಯದಲ್ಲಿ ದೃಢವಾಗಿ ನಿಲ್ಲುವಂತೆ ಚಿಕಿತ್ಸೆ ನೀಡುವರು. ಅದರಂತೆಯೇ ಒಬ್ಬನು ಪಾಪದಿಂದಲೂ, ಶಾಪದಿಂದಲೂ, ವ್ಯಾಧಿಯಿಂದಲೂ ಬಿಡುಗಡೆಯಾದ ಮೇಲೆ ಆತ್ಮೀಕ ಜೀವಿತದಲ್ಲಿ ಬೆಳೆಯಬೇಕು. ದೇವರ ಮಹಿಮೆಯಲ್ಲಿ ಸೇರಬೇಕೆಂಬ ದಾಹವನ್ನು ಬೆಳೆಸಿಕೊಳ್ಳುವಾಗ ಕರ್ತನ ಮಹಿಮೆ ಬಲ ಅವನನ್ನು ಪೂರ್ಣತೆಗೆ ನಡೆಸುವದು. ಮರಣದಿಂದ ಪಾರು ಮಾಡುವದು ಬಿಡುಗಡೆಯ ಸುವಾರ್ತೆ. ಜೀವದಲ್ಲಿ ಪೂರ್ಣ ಹೊಂದುವದು ಮಹಿಮೆಯ ಸುವಾರ್ತೆ.

ನಾವು ಆ ಬಿಡುಗಡೆಯ ಸುವಾರ್ತೆ, ಮಹಿಮೆಯ ಸುವಾರ್ತೆಯ ಕುರಿತು ಸ್ಪಷ್ಟವಾಗಿ, ದೃಢವಾಗಿ ಅರಿತುಕೊಳ್ಳಬೇಕು. ಅಬ್ರಹಾಮನ ಜೀವಿತವನ್ನು ಕುರಿತು ಓದಿ ನೋಡಿರಿ. ಮೊದಲನೆಯದಾಗಿ ಅವನು ತನ್ನ ಸ್ವಂತ ದೇಶವನ್ನು ಬಂಧುಗಳನ್ನೂ, ತಂದೆಯ ಮನೆಯನ್ನು ಬಿಟ್ಟು ಹೊರಟು ಹೋಗಬೇಕು. ಅದು ಬಿಡುಗಡೆಯ ಸುವಾರ್ತೆ. ನಂತರ ಅವನು ಹಾಲೂ ಜೇನೂ ಹರಿಯುವ ಕಾನಾನನ್ನು ಸ್ವಾಧೀನಪಡಿಸಿಕೊಳ್ಳಬೇಕು. ಇದು ಮಹಿಮೆಯ ಸುವಾರ್ತೆ. ಲೋಟನ ಚರಿತ್ರೆಯನ್ನು ಓದಿದರೆ ಸೊದೋಮ ನಾಶವಾಗುವದು. ಅದನ್ನು ಬಿಟ್ಟು ಹೊರಗೆ ಬಾ ! ಎಂಬುದು ಬಿಡುಗಡೆಯ ಸುವಾರ್ತೆ ಓಡಿ ಹೋಗು, ಪ್ರಾಣವನ್ನು ಉಳಿಸಿಕೋ, ಹಿಂದಕ್ಕೆ ನೋಡಬೇಡ. ಈ ಪ್ರದೇಶದಲ್ಲಿ ಎಲ್ಲಿಯೂ ನಿಲ್ಲದೆ ಬೆಟ್ಟದ ಸೀಮೆಗೆ ಓಡಿ ಹೋಗು ಎಂಬುದು ಮಹಿಮೆಯ ಸುವಾರ್ತೆ.

ಕ್ರೈಸ್ತ ಜೀವಿತದಲ್ಲಿ ರಕ್ಷಣೆ ಹೊಂದುವದು ಮೊದಲನೆಯ ಅನುಭವ. ಅದೇ ವೇಳೆಯಲ್ಲಿ ಪವಿತ್ರಾತ್ಮನನ್ನು ಹೊಂದಿ ಅಭಿಷೇಕ ಪಡೆದು ಪೂರ್ಣತೆಯೆಡೆಗೆ ಸಾಗುವದು ಮಹಿಮೆಯ ಸುವಾರ್ತೆಯಾಗಿದೆ. ಕ್ರಿಸ್ತನಂತೆ ಮಾರ್ಪಡಬೇಕೆಂಬುದೇ ನಿಮ್ಮ ಹೃದಯದ ಮಿಡಿತವಾಗಿರಲಿ. ಯೇಸುಕ್ರಿಸ್ತನ ಬರುವಿಕೆಯನ್ನು ಎರಡು ಭಾಗಗಳಾಗಿ ವಿಭಾಗಿಸಬಹುದು. ಮೊದಲ ಬರುವಿಕೆಯಲ್ಲಿ ಯೇಸುಕ್ರಿಸ್ತನು ರಕ್ಷಣೆಯನ್ನು ನೀಡಲು ದಾಸನ ರೂಪವನ್ನು ತಳೆದು ಕೊಯ್ಯಲ್ಪಟ್ಟ ಕುರಿಮರಿಯಾದನು. ಇದು ಬಿಡುಗಡೆಯ ಬರುವಿಕೆ. ಆದರೆ ಇನ್ನು ಮುಂದೆ ಬರಲಿರುವ ಆತನ ಎರಡನೇ ಬರುವಿಕೆ. ಪರಿಶುದ್ಧ ಜನರನ್ನು ಒಂದಾಗಿ ಸೇರಿಸಲು, ದೇವದೂತರೊಂದಿಗೆ ಮಹಿಮೆಯ ರಾಜನಾಗಿ ಬರುವನು.

ದೇವಮಕ್ಕಳೇ ಕರ್ತನ ಎರಡನೇ ಬರುವಿಕೆಯ ಸೂಚನೆಗಳು ನೆರವೇರುತ್ತಿವೆ. ಇನ್ನು ತಡಮಾಡದೆ ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ ಮಾರ್ಪಟ್ಟು, ಆತನ ಸಾರೂಪ್ಯವನ್ನು ಪಡೆದುಕೊಳ್ಳಲು ಪ್ರಯಾಸಪಡಿರಿ. ಮದಲಿಂಗನನ್ನು ಎದುರುಗೊಳ್ಳಲು ಸಿದ್ಧವಾಗಿದ್ದ ಬುದ್ಧಿವಂತ ಕನ್ಯೆಯರಂತೆ ನಿಮ್ಮನ್ನು ಸಿದ್ಧಪಡಿಸಿಕೊಳ್ಳಿರಿ.

– ಸಂಗ್ರಹ.


**ಜಾಹಿರಾತು**

**ಗಾರೆ ಕೆಲಸಗಾರರು ಹಾಗೂ ಸೆಂಟ್ರಿಂಗ್ ಕೆಲಸಗಾರರು ಬೇಕಾಗಿದ್ದಾರೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ

**ದೂರವಾಣಿ ಸಂಖ್ಯೆ : 9902334941.**


ಆಗ ನೀವು ಯೆಹೋವನಲ್ಲಿ ಉಲ್ಲಾಸಪಡುವಿರಿ, ಮತ್ತು ನಾನು ನಿಮ್ಮನ್ನು ಭೂಮಿಯ ಎತ್ತರವಾದ ಪ್ರದೇಶಗಳ ಮೇಲೆ ಹತ್ತಿಸಿ ನಿಮ್ಮ ಪಿತೃವಾದ ಯಾಕೋಬನ ಸ್ವಾಸ್ತ್ಯವನ್ನು ನೀವು ಅನುಭವಿಸುವಂತೆ ಮಾಡುವೆನು (ಯೆಶಾ. 58:14).

# ಅಸಾಧ್ಯವಾದದ್ದು ಒಂದೂ ಇಲ್ಲ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**"ಎಲೈ, ಕರ್ತನಾದ ಯೆಹೋವನೇ ಆಹಾ, ನೀನು ಭುಜವನ್ನೆತ್ತಿ ನಿನ್ನ ಮಹಾ ಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ; ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ"** (ಯೆರೆ. 32:17). ಕರ್ತನಲ್ಲಿ ಪ್ರಿಯರೇ, ದೇವರ ವಾಕ್ಯವನ್ನು ಧ್ಯಾನಿಸುವಾಗ ಇಸ್ರಾಯೇಲ್ಯರು ನಾಲ್ವತ್ತು ವರ್ಷಗಳ ಕಾಲ ಮರುಭೂಮಿಯಲ್ಲಿ ಪ್ರಯಾಣ ಮಾಡಿದರು. ಆದರೆ ಅವರ ವಸ್ತ್ರವು ಜೀರ್ಣವಾಗಲಿಲ್ಲ. ಕೆರಗಳು ಕಿತ್ತು ಹೋಗಲಿಲ್ಲ. ಬಿಸಿಲಿನ ಬೇಗೆಯಲ್ಲಿರುವ ಮರುಭೂಮಿಯಲ್ಲಿ ಅವರಿಗೆ ಕುಡಿಯುವದಕ್ಕೆ ಬೇಕಾದಷ್ಟು ನೀರು ಸಿಕ್ಕಿತು. ದೇವರು ಬಂಡೆಯನ್ನು ಸೀಳಿ ಅವರಿಗೆ ನೀರನ್ನು ಕೊಟ್ಟನು. ಈ ಜನರು ಎಂದೂ ಬಿಸಿಲಿನ ತಾಪವನ್ನು ತಿಳಿಯಲಿಲ್ಲ; ಹಗಲಿನಲ್ಲಿ ಮೇಘಸ್ತಂಭವು ಅವರಿಗೆ ನೆರಳಾಗಿತ್ತು. ರಾತ್ರಿಯಲ್ಲಿ ಚಳಿ ಮತ್ತು ಕತ್ತಲೆಯನ್ನು ಅನುಭವಿಸಲಿಲ್ಲ; ಅಗ್ನಿಸ್ತಂಭವು ಅವರಿಗೆ ಬೆಳಕು ಮತ್ತು ಶಾಖವನ್ನು ಕೊಟ್ಟಿತು. ದೇವರು ಆಶ್ಚರ್ಯಕರವಾದ ರೀತಿಯಲ್ಲಿ ನಡೆಸಿದನು. ಅಂದು ಆ ಲಕ್ಷಲಕ್ಷದೋಪಾದಿಯಲ್ಲಿರುವ ಇಸ್ರಾಯೇಲರಿಗೆ ಯಾವುದೇ ನಿರೀಕ್ಷೆಯಿಲ್ಲದೆ ಬತ್ತಿದ ಮರುಭೂಮಿಯಲ್ಲಿ ಆಶೀರ್ವಾದದ ಮಳೆಗರೆದು ನಾಲ್ವತ್ತು ವರುಷ ಅವರನ್ನು ಅರಣ್ಯದಲ್ಲಿಯೂ ಮರುಭೂಮಿಯಲ್ಲಿಯೂ ದೇವರು ಅವರನ್ನು ಸಾಕಿದನು (ನೆಹೆ. 9:9–21).

ಇದನ್ನು ಓದುವ ಪ್ರಿಯರೇ, ಸ್ವಲ್ಪಧ್ಯಾನಿಸಿರಿ ಐಗುಪ್ತ ದಾಸತ್ವದಿಂದ ಬಿಡುಗಡೆ ಮಾಡಿದ ನಂಬಿಗಸ್ತನಾದ ದೇವರು ಒಂದಲ್ಲ, ಎರಡಲ್ಲ, ಹತ್ತಲ್ಲ, ನಾಲ್ವತ್ತು ವರ್ಷ ಲಕ್ಷಾಂತರ ಇಸ್ರಾಯೇಲ್ಯರನ್ನು ಪೋಷಿಸಿದನು. ವಾಕ್ಯವು ಸ್ಪಷ್ಟವಾಗಿ ಹೇಳುತ್ತದೆ, ಅವರಲ್ಲಿ ಬಲಹೀನವಾದ ವ್ಯಕ್ತಿ ಇರಲಿಲ್ಲ. ಪ್ರಿಯರೇ, ಇಂದು ನಾವು ದೇವರಿಗೆ ಉಪಕಾರಸ್ತುತಿಮಾಡಬೇಕು, ಅಂದು ಮಾಡಲು ಶಕ್ತನಾದ ದೇವರು ಇಂದು ಕೂಡಾ ಮಾಡಲು ಶಕ್ತನಾಗಿದ್ದಾನೆ **"ನೀನು ಸಕಲ ಕಾರ್ಯಗಳನ್ನು ನಡಿಸಬಲ್ಲಿಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ"** (ಯೋಬ. 42:2). ನೀವು ನಂಬುವುದಾದರೆ ನಿಮ್ಮ ಜೀವಿತದಲ್ಲಿ ಕಾರ್ಯಮಾಡಲು ಶಕ್ತನಾದ ದೇವರಾಗಿದ್ದಾನೆ. ಯೋಬ, ಯೆರೆಮೀಯನಾಗೆ ನೀವು ವಾಕ್ಯಗಳನ್ನು ನಿಮ್ಮ ಸಮಸ್ಯೆಗಳ ಮುಂದೆ ಅರಿಕೆಮಾಡಿರಿ. ಅಸಾಧ್ಯ ಸಂಗತಿಗಳು ಸಾಧ್ಯವಾಗುವುದನ್ನು ನಿಮ್ಮ ಕಣ್ಣುಗಳು ಕಾಣುತ್ತದೆ.

ಪ್ರಿಯರೇ, ನಾವು ಯಾಬೇಚನ ಕುರಿತು ಧ್ಯಾನಿಸುವಾಗ **"ಯಾಬೇಚನು ತನ್ನ ಅಣ್ಣತಮ್ಮಂದಿರಲ್ಲಿ ಘನವಂತನಾಗಿದ್ದನು; ಇವನನ್ನು ಬಹುವೇದನೆಯಿಂದ ಹೆತ್ತನೆಂದು ಹೇಳಿ ಇವನ ತಾಯಿ ಇವನಿಗೆ ಯಾಬೇಚೆಂದು ಹೆಸರಿಟ್ಟಳು. ಯಾಬೇಚನು ಇಸ್ರಾಯೇಲ್‌ದೇವರಿಗೆ – ನೀನು ನನ್ನನ್ನು ವಿಶೇಷವಾಗಿ ಆಶೀರ್ವದಿಸಿ ನನ್ನ ಪ್ರಾಂತವನ್ನು ವಿಸ್ತರಿಸಿ ನಿನ್ನ ಹಸ್ತದಿಂದ ನನ್ನನ್ನು ಹಿಡಿದು ಯಾವ ವೇದನೆಯೂ ಉಂಟಾಗದಂತೆ ನನ್ನನ್ನು ರಕ್ಷಿಸಬಾರದೇ ಎಂದು ಮೊರೆಯಿಡಲು ದೇವರು ಅವನ ಮೊರೆಯನ್ನು ಲಾಲಿಸಿದನು"** (1 ಪೂರ್ವ. 4:9–10). ಯಾಬೇಚ ಎಂಬ ಹೆಸರಿನ ಅರ್ಥ ದು:ಖ, ವೇದನೆ, ಸಮಸ್ಯೆ, ಇಕ್ಕಟ್ಟು ಇತ್ಯಾದಿ 'ಯಾಬೇಚ' ಅನೇಕ ಸಾರಿ ಗೋಳಾಡಿರಬಹುದು. "ನನ್ನ ಜೀವಮಾನದಲ್ಲಿ ಒಂದು ಆಶೀರ್ವಾದವಾದರೂ ದೊರೆಯುವುದಿಲ್ಲ ಅನ್ನಿಸುತ್ತದೆ. ನನ್ನ ಹೆಸರಿನ ಹಾಗೆಯೇ ನಿರಾಶೆ, ದು:ಖ, ವೇದನೆ, ಬೀಳ್ವಿಕೆ ಮಾತ್ರ ನನಗೆ ನೇಮಿಸಲ್ಪಟ್ಟಿದೆ". ಆದರೆ ನಾನು ಹೀಗೆ ಎಣಿಸುತ್ತೇನೆ. ಯಾವಾಗ ಯಾಬೇಚ ಮೋಶೆಯ ಗ್ರಂಥವನ್ನು ತೆರೆದು ಇಸ್ರಾಯೇಲ್ಯರ ಕುರಿತು ದೇವರು ಮಾಡಿದ ಮಹತ್ಕಾರ್ಯಗಳನ್ನು ಧ್ಯಾನಿಸುವಾಗ ಆತನೊಳಗೆ ನಂಬಿಕೆ ಬೆಳೆಯಲು ಆರಂಭಿಸಿತು.

ಯಾಬೇಚನು ಒಂದು ಕಾಲದಲ್ಲಿ ನಿರಾಶನಾಗಿದ್ದನು, ದು:ಖಿತನಾಗಿದ್ದನು, 'ನಾನು ಎಂದಿಗೂ ಆಶೀರ್ವಾದ ಹೊಂದುವದಿಲ್ಲ' ಎಂದು ವೇದನೆಯಿಂದ ಮನಸ್ಸಿನಲ್ಲಿ ಆಲೋಚಿಸಿದ್ದನು. ಆದರೆ ದೇವರ ವಾಕ್ಯ ಧ್ಯಾನಿಸಿದಾಗ ಯಾಬೇಚನ ರೋಗಗ್ರಸ್ಥ ಆಲೋಚನೆ ದೂರವಾಯಿತು. ಅವನು ಈಗ ದೇವರ ಬಳಿಯಲ್ಲಿ ತನ್ನ ಸಂಕಟವನ್ನು ಹೇಳಿ ಬೇಡುತ್ತಿದ್ದಾನೆ. ಇಸ್ರಾಯೇಲ್ ದೇವರೇ, ನೀನು ನನಗೆ ಸಹಾಯ ಮಾಡಬೇಕು, ನನಗೆ ವಿಶಾಲತೆಯನ್ನು ಕೊಡಬೇಕು; ನನಗೆ ಅಡ್ಡಿಮಾಡುವ, ಈ ಬಂಧನಗಳು, ರೋಗಗಳು, ದು:ಖಗಳು, ಇವುಗಳನ್ನು ತೆಗೆದುಹಾಕಬೇಕು ಎಂದು. ದೇವರು ಯಾಬೇಚನ ಪ್ರಾರ್ಥನೆ ಕೇಳಿ ಆತನ ಜೀವಿತದಲ್ಲಿ ಅದ್ಭುತಮಾಡಿದನು.

ಪ್ರಿಯರೇ, ಸೋತು ಹೋಗಬೇಡಿರಿ, ನಿಮ್ಮ ವೇದನೆ, ದು:ಖ, ಕಷ್ಟ, ಸಮಸ್ಯೆ, ಹೋರಾಟ, ಇಕ್ಕಟ್ಟು ಯಾರು ಅರ್ಥ ಮಾಡದಿದ್ದರು (ಇಬ್ರಿ. 13:8). ಯಾವ ರೀತಿಯ ಪ್ರತಿಕೂಲಗಳು ಎದುರಾದರೂ, ಯಾವ ರೀತಿಯ ಸಮಸ್ಯೆಗಳು ನಿಮ್ಮ ಜೀವಿತದಲ್ಲಿ ಸಂಭವಿಸಿದರೂ ದೇವರ ಬಳಿಯಲ್ಲಿ ಬೇಡಿಕೊಳ್ಳಿರಿ ಖಂಡಿತವಾಗಿಯೂ ಉತ್ತರ ಸಿಕ್ಕುತ್ತದೆ.

ಯೆರೂಸಲೇಮಿನಲ್ಲಿ ವಾಸಿಸುವ ಚೀಯೋನಿನ ಜನರೇ, ನೀವು ಇನ್ನು ಅಳುವದೇ ಇಲ್ಲ; ನೀವು ಕೂಗಿಕೊಂಡ ಶಬ್ದವನ್ನು ಆತನು ಕೇಳಿ ನಿಮಗೆ ಕೃಪೆ ತೋರಿಸೇ ತೋರಿಸುವನು (ಯೆಶಾ. 30:19).

ಒಂದು ಕೂಟದಲ್ಲಿ ಒಬ್ಬ ಸೇವಕರು ತಮ್ಮ ಸಾಕ್ಷಿಯನ್ನು ಹಂಚುತ್ತಿದ್ದರು. ಅವರು ಒಂದು ಮಾರಕವಾದ ಟಿ.ಬಿ ಖಾಯಿಲೆಗೆ ತುತ್ತಾದರು. ಆಗ ಇದಕ್ಕೆ ಈಗಿನ ಹಾಗೆ ಔಷಧಿ ಇರಲಿಲ್ಲ. ಅವರು ರಕ್ತವನ್ನು ವಾಂತಿ ಮಾಡುತ್ತಿದ್ದರು. ಆಸ್ಪತ್ರೆಯಲ್ಲಿ ಹಲವು ತಿಂಗಳುಗಳ ಕಾಲ ಅಡ್ಮಿಟ್ ಆಗಿದ್ದರು. ಅವರು ಹತ್ತಿರದ ರೋಗಿಗೆ ಈದೇ ರೋಗ ಅವರು ಸತ್ತುಹೋದರು. ಇವರು ರೋಮನ್ ಕ್ಯಾಥೋಲಿಕ್, ಇವರಿಗೆ ಯಾರೋ ಒಬ್ಬರು ಸತ್ಯವೇದ ತಂದುಕೊಟ್ಟರು. ಇವರು ಬೇರೆ ರೋಗಿಗಳೊಂದಿಗೆ ಹೋಗಿ ಮಾತಾಡಿ ಟೈಮ್ ವೇಸ್ಟ್ ಮಾಡುತ್ತಿರಲಿಲ್ಲ. ಯಾವಾಗ ಕೈಯಲ್ಲಿ ಬೈಬಲ್ ಸಿಕ್ಕಿತ್ತು ಅದನ್ನು ಓದಲು ಪ್ರಾರಂಭಿಸಿದರು. ಮಾತ್ರವಲ್ಲ ಅದರಲ್ಲಿ ಬರೆಯಲ್ಪಟ್ಟ ದೇವರ ವಾಗ್ದಾನ ವಾಕ್ಯವನ್ನು ಅರಿಕೆ ಮಾಡಿ ಪ್ರಾರ್ಥಿಸಲು ಪ್ರಾರಂಭಿಸಿದರು. ಯಾವ ಸೇವಕರು ಅವರಿಗಾಗಿ ಪ್ರಾರ್ಥಿಸಲು ಬರಲಿಲ್ಲ. ಅವರು ಈ ರೀತಿ ಅರಿಕೆ ಮಾಡಿದರು. ನಾನು ಸಾಯುವುದಿಲ್ಲ ಜೀವದಿಂದೆದ್ದು ಯಾಹುವಿನ ಕ್ರಿಯೆಯನ್ನು ಸಾರುವೆನು ಎಂದು ಬಾಯಿತೆರೆದು ಅರಿಕೆಮಾಡಿದರು, ಇದರ ನಂತರವಾಗಿ ರಕ್ತ ವಾಂತಿಯಾಗುವುದು ನಿಂತಿತು. ದೇವರು ಸಂಪೂರ್ಣವಾಗಿ ಅವರನ್ನು ಟಿ.ಬಿ ಕಾಯಿಲೆಯಿಂದ ಬಿಡುಗಡೆ ಮಾಡಿದನು. ಅದರ ನಂತರವಾಗಿ ಅವರು ಆಟದ ಮೈದಾನಕ್ಕೆ ಹೋಗಿ ಮೊಣಕಾಲು ಹಾಕಿ ಕಣ್ಣೀರಿಟ್ಟು ಗಂಟೆಗಟ್ಟಲೆ ಬೇಡಿದರು. ದೇವರೇ ನಾನು ಏನು ಮಾಡಬೇಕು, ಕೇಳಿದರು ದೇವರು ಅವರಿಗೆ ಹೇಳಿದರು. ನಾನು ನಿನ್ನನ್ನು ಪ್ರವಾದಿಯನ್ನಾಗಿ ನೇಮಿಸಿದ್ದೇನೆ, ನೀನು ಅನೇಕ ಕಡೆಗಳಿಗೆ ಹೋಗಿ ನನ್ನ ಸೇವೆ ಮಾಡುತ್ತಿ ಎಂಬುದಾಗಿ ತಿಳಿಸಿದರು. ಅದರಂತೆ, ದೇಶ ವಿದೇಶಗಳಲ್ಲಿ ಈ ಸೇವಕರು ಬಲವಾಗಿ ಉಪಯೋಗಿ ಸಲ್ಪಡುತ್ತಿದ್ದಾರೆ. ಈ ಸೇವಕರು ಬಳ್ಳಾರಿಯವರು.

ಈ ಕೂಟದಲ್ಲಿ ಪಾಲ್ಗೊಂಡ ನಾವು ಕಣ್ಣಾರೆ ಅವರ ಸೇವೆಯನ್ನು ನೋಡಿದ್ದೇವೆ. ಕೂಡಿ ಬಂದ ಅನೇಕರು ಆಶೀರ್ವಾದಿಸಲ್ಪಟ್ಟರು. ಕರ್ತನು ಅವರ ಮೂಲಕವಾಗಿ ನಮ್ಮೊಂದಿಗೆ ಮಾತಾಡಿದನು.

ಪ್ರಿಯರೇ, ದೇವರಿಗೆ ಕಾರ್ಯ ಮಾಡಲು ಸಾಧ್ಯವಿಲ್ಲದ, ಸ್ವಸ್ಥಮಾಡಲು ಸಾಧ್ಯವಿಲ್ಲದ, ರೂಪಾಂತರಗೊಳಿಸಲು ಸಾಧ್ಯವಿಲ್ಲದ ಯಾವ ಸಂಗತಿಯೂ ಇಲ್ಲ ದೇವರಿಗೆ ಎಲ್ಲವೂ ಸಾಧ್ಯ.

ನಮ್ಮ ಎಲ್ಲಾ ಸಮಸ್ಯೆಗಳಿಗಿಂತ, ಸನ್ನಿವೇಶಗಳಿಗಿಂತ ದೊಡ್ಡದಾಗಿ, ಸರ್ವಶಕ್ತನಾದ ದೇವರನ್ನು ಕಾಣಬೇಕು. ಕರ್ತನೊಂದಿಗೆ ಆಳವಾದ ಸಂಬಂಧ ನಮಗಿರಬೇಕು. ಸರ್ವಶಕ್ತನಾದ ದೇವರು ನಮ್ಮ ಸಂಗಡ ಇದ್ದಾರೆ. ಅಸಾಧ್ಯವಾದದ್ದು ಒಂದೂ ಇಲ್ಲ. ಆತನು ನಮ್ಮ ಪ್ರತಿಕೂಲ ಸನ್ನಿವೇಶಗಳನ್ನು ಅನುಕೂಲವಾಗಿ ಮಾರ್ಪಡಿಸುತ್ತಾನೆ. **"ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ"** (ರೋಮ. 8:28).

ಅನೇಕರು ಇಂದು ಆರ್ಥಿಕ ವಿಷಯದಲ್ಲಿ ಸಂಕಷ್ಟ ಗೊಳಗಾಗಿದ್ದಾರೆ. ಸಾಲದ ಮೇಲೆ ಸಾಲ ಅನೇಕ ವ್ಯಾಪಾರಿಗಳು ವ್ಯಾಪಾರದಲ್ಲಿ ನಷ್ಟ ಅನುಭವಿಸುತ್ತಿದ್ದಾರೆ. ಕೆಲವರಿಗೆ ಹೊಸ ವ್ಯಾಪಾರ ಪ್ರಾರಂಭಮಾಡಬೇಕು ಎಂಬ ಆಲೋಚನೆಯಲ್ಲಿ ಇದ್ದರೆ. ಕ್ರಿಸ್ತಯೇಸುವಿನಲ್ಲಿದ್ದುಕೊಂಡು ಆಲೋಚನೆ ಹೇಳುತ್ತಾನೆ, ಅಂದು (1 ಅರಸು. 17:10–16). ಚಾರೆಪ್ತ ವಿಧವೆ ಮಾಡಿದ ಹಾಗೆ ತನಗಿದ್ದ ಒಂದು ತುತ್ತನ್ನು ಬಚ್ಚಿಟ್ಟುಕೊಳ್ಳದೆ ತನಗೆ ಬಂದ ದೇವ ಸೇವಕನಿಂದ ಹೊರಟು ಬಂದ ದೇವ ಆಲೋಚನೆಗೆ ತಲೆಬಾಗಿ ತನ್ನನ್ನು ತನ್ನ ಮಗನನ್ನು ಲೆಕ್ಕಿಸದೆ, ಜೀವನಕ್ಕೆ ಆಧಾರವಾಗಿದ್ದ ತುತ್ತನ್ನು ಇಟ್ಟುಕೊಳ್ಳದೆ ಇನ್ನು ನಾವು ಒಟ್ಟಿಗೆ ಸಾಯಬೇಕು ಎಂದು ಬರಗಾಲದ ಅವಸ್ಥೆಯಲ್ಲಿ ವಿಧೇಯಳಾಗಿ ತನ್ನ ಕೊರತೆಯಲ್ಲಿ, ಇಕ್ಕಟಲ್ಲಿ, ಪ್ರಾಣ ಸಂಕಟದಲ್ಲಿಯೂ ದೇವರನ್ನು ಸನ್ಮಾನಿಸಿದಳು. ಇದರ ನಿಮಿತ್ತವಾಗಿ ದೇವರ ಸೇವಕನ ಬಾಯಿಂದ ಹೊರಟಂಥ ಮಾತಿನ ಪ್ರಕಾರವಾಗಿ ದೇಶಕ್ಕೆ ಮಳೆ ಬರುವ ತನಕ ಮಡಕೆಯಲ್ಲಿರುವ ಹಿಟ್ಟು ತೀರಲಿಲ್ಲ. ಮೊಗೆಯಲ್ಲಿದ್ದ ಎಣ್ಣೆ ಮುಗಿಯಲಿಲ್ಲ.

ಪ್ರಿಯರೇ, ದೇವರಾಜ್ಯಕ್ಕಾಗಿ, ಯಥಾರ್ಥವಾಗಿ ಬಿತ್ತಿರಿ. ಸಾಮರ್ಥ್ಯ ನೋಡಿ ಬಿತ್ತುವುದಲ್ಲ ಸಂತೋಷವಾಗಿ ಬಿತ್ತಿರಿ, **"ಬಿತ್ತುವವನಿಗೆ ಬೀಜವನ್ನೂ ಉಣ್ಣುವವನಿಗೆ ಆಹಾರವನ್ನೂ ಕೊಡುವಾತನು ನಿಮಗೂ ಬಿತ್ತುವದಕ್ಕೆ ಬೀಜವನ್ನು ಕೊಟ್ಟು ಹೆಚ್ಚಿಸಿ ನಿಮ್ಮ ಧರ್ಮಕಾರ್ಯಗಳಿಂದಾಗುವ ಫಲಗಳನ್ನು ಕೊಡ ಶಕ್ತರಾಗುವಿರಿ; ಇದಲ್ಲದೆ ನಿಮ್ಮ ದಾನಗಳು ನಮ್ಮ ಕೈಯಿಂದ ಮತ್ತೊಬ್ಬರಿಗೆ ಸೇರಿದಾಗ ದೇವರಿಗೆ ಕೃತಜ್ಞತಾಸ್ತುತಿಯನ್ನುಂಟು ಮಾಡುವದು. ಹೇಗೆಂದರೆ ನೀವು ನಡಿಸುವ ಈ ಧರ್ಮಕಾರ್ಯವು ದೇವಜನರ ಕೊರತೆಗಳನ್ನು ನೀಗುವದು ಮಾತ್ರವಲ್ಲದೆ ಅನೇಕರಿಂದ ದೇವರಿಗೆ ಕೃತಜ್ಞತಾಸ್ತುತಿಯನ್ನು ಹುಟ್ಟಿಸುವದು"** (2 ಕೊರಿ. 9:10–12). ದೇವಸೇವಕರು ನಿಮ್ಮ ಮನೆಗೆ ಬರುವಾಗ ಗುಣಗುಟ್ಟಬೇಡಿರಿ. ಒಬ್ಬ ಸೇವಕನು ದೇಶದಲ್ಲಿ ನೆಲೆಗೊಳ್ಳುವುದು ಆ ದೇಶಕ್ಕೆ ಆಶೀರ್ವಾದ, ಕರ್ತನು ದೇಶದಲ್ಲಿ ವ್ಯವಹರಿಸುವುದು ತನ್ನ ಸೇವಕನ ಮುಖಾಂತರವಾಗಿ ಇದನ್ನು ಓದುವ ಪ್ರತಿಯೊಬ್ಬನ ಆತ್ಮೀಕ ಕಣ್ಣು ತೆರೆಯಲಿ

ನನ್ನ ಶತ್ರುವೇ, ನನ್ನ ವಿಷಯದಲ್ಲಿ ಹಿಗ್ಗಬೇಡ; ನಾನು ಬಿದ್ದಿದ್ದರೂ ಏಳುವೆನು
(ಮೀಕ. 7:8).

ಎಂಬುದಾಗಿ ಪ್ರಾರ್ಥಿಸುತ್ತೇನೆ. ಅವರು ನಿಮ್ಮ ಮನೆಗೆ ಬರುವಂಥದು ನಿಮ್ಮ ಆಶೀರ್ವಾದಕ್ಕಾಗಿಯೇ ನಿಮ್ಮ ಪರಿಸ್ಥಿತಿ, ಕಣ್ಣೀರು, ಕೊರತೆ, ಸಂಕಟ, ಇಕ್ಕಟ್ಟು, ಸೋಲುವಿಕೆ, ನಿರಾಶೆ ಏನೆಂಬುದನ್ನು ತಿಳಿದ ದೇವರು ತನ್ನ ಉದ್ದೇಶದೊಂದಿಗೆ ಸರಿಯಾಗಿ ತನ್ನ ಸಮಯದಲ್ಲಿ ನಿಮ್ಮನ್ನು ಆಶೀರ್ವಾದ ಮಾಡುವುದಕ್ಕಾಗಿಯೇ ತನ್ನ ಸೇವಕರನ್ನು ನಿಮ್ಮ ಮನೆಗೆ ಕಳುಹಿಸುತ್ತಾನೆ. ಯಾವಾಗ ಮನೆಗೆ ಕಾಲಿಡುತ್ತಾರೋ ಕರ್ತನು ಆ ಸೇವಕನ ಪ್ರಾರ್ಥನೆ ಕೇಳಿ ಮನೆಯನ್ನು, ಕುಟುಂಬವನ್ನು, ವ್ಯಾಪಾರವನ್ನು, ಸ್ವಾಸ್ಥ್ಯವನ್ನು ಆಶೀರ್ವಾದ ಮಾಡುತ್ತಾನೆ.

ಪ್ರಿಯರೇ, ಚಾರೆಪ್ತ ವಿಧವೆಯ ಹಾಗೆ ನಿಮ್ಮ ಅವಸ್ಥೆ ಇರುವುದಾದರೆ ದಯಮಾಡಿ ನಿಮ್ಮ ಸತ್ಯವೇದವನ್ನು ತೆರೆದು (1 ಅರಸು. 17:8–24) ಓದಿ ಸೇವಕರನ್ನು ಸತ್ಕರಿಸುವುದು, ಸನ್ಮಾನಿಸುವದು ನಮ್ಮ ಕರ್ತವ್ಯವಾಗಿದೆ. ಸೇವಕರು ಸುಮ್ಮ ಸುಮ್ಮನೆ ನಿಮ್ಮ ಮನೆಗೆ ಬರುವುದಿಲ್ಲ ದೇವರ ಯೋಜನೆಯೊಂದಿಗೆ, ಪ್ರಾರ್ಥನೆಯಿಂದ ನಿಮ್ಮ ಮನೆಗೆ ಬರುತ್ತಾರೆ. ಸೇವಕರು ಬರುವಂಥದು ಅದು ನಿಮಗೂ, ನಿಮ್ಮ ಕುಟುಂಬಕ್ಕೂ, ಸ್ವಾಸ್ಥ್ಯಕ್ಕೂ ಆಶೀರ್ವಾದ ಆದುದರಿಂದ ಕಳ್ಳ ಕುರುಬರಿಗೆ, ದುರ್ಬೋಧಕರಿಗೆ, ಸುಳ್ಳು ಪ್ರವಾದಿಗಳಿಗೆ, ಎಚ್ಚರಿಕೆಯಾಗಿರಿ ಅಂಥವರನ್ನು ಏನು ಮಾಡಬೇಕೆಂದು ಸತ್ಯವೇದ ನಮಗೆ ಸ್ಪಷ್ಟವಾಗಿ ತಿಳಿಸುತ್ತದೆ (2 ಯೋಹಾ. 7–11, 2 ತಿಮೊ. 4:1–3).

ಕರ್ತನಲ್ಲಿ ಪ್ರಿಯರೇ, ನೀವು ನಂಬಿಗಸ್ತರಾಗಿದ್ದರೆ ದೇವರು ನಿಮಗಾಗಿ ಆಕಾಶದ್ವಾರಗಳನ್ನು ತೆರೆಯುತ್ತಾನೆ. ದೇವರ ರಾಜ್ಯದ ಅಭಿವೃದ್ಧಿಗಾಗಿ ನಿಮ್ಮ ಭಾಗವನ್ನು ಸರಿಯಾಗಿ ಮಾಡಿದರೆ ನಿಮ್ಮ ಜೀವಿತದಲ್ಲಿ ಅಸಾಧ್ಯವಾದದ್ದು ಒಂದು ಇಲ್ಲ.

ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

---

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

# ಮಹಿಳೆಯರ ಸ್ವರ

## ಹಿಂಜಾರುವಿಕೆಯಿಂದ ಪುನರ್‌ಸ್ಥಾಪನೆ

1. ಹಿಂಜಾರುವಿಕೆ ಅಂದರೇನು? ಯೆರೆ 3:13 ದ್ರೋಹ.
2. ಯೆರೆ 8:5 ಹಿಂದಿರುಗದಂತೆ ಬಿಟ್ಟು ಹೋಗುವುದು.
3. ಜ್ಞಾನೋ 14:14, ಹೊಶೆ 14:4 ಭ್ರಷ್ಟರಾಗವುದು.
4. ಹೊಶೇ 11:7 ದೇವರ ಕಡೆಯಿಂದ ತಿರುಗಿಕೊಳ್ಳುವುದು.
5. ಹೊಶೆ 4:16 ಮೊಂಡತನದ ನಡೆ.
6. ಯೆಶಾಯ 57:1 ಸಜ್ಜನರ ನಾಶನ
7. ಯೆಶಾಯ 57:2 ಆತ್ಮೀಕ ನಿದ್ರೆ.
8. ಯೊಹಾನ್ನ ಕ್ರಿಸ್ತನೊಂದಿಗೆ ಸಂಚರಿಸುವುದನ್ನು ಬಿಡುವುದು.
9. 2 ತಿಮೋ 2:16 ಭಕ್ತಿಹೀನತೆ.
10. 1 ತಿಮೋ 4:1 ಕ್ರಿಸ್ತ ನಂಬಿಕೆಯಿಂದ ಬಿದ್ದು ಹೋಗುವುದು.

ಅನೇಕರು ಹೇಳುವಂತ ಒಂದು ಮಾತು ಅದ್ಭುತಗಳಲ್ಲಿ ದೊಡ್ಡ ಅದ್ಭುತ ಹೊಸದಾಗಿ ಹುಟ್ಟುವುದು ಎಂದು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಆದರೂ ಅದಕ್ಕೆ ಇನ್ನೊಂದು ಪದವನ್ನು ಸೇರಿಸಲು ಬಯಸುತ್ತೇನೆ. ಹೊಸದಾಗಿ ಹುಟ್ಟಿದವನು ಪರಕೋಕಕ್ಕೆ ಮುಟ್ಟುವುದು. ಎಲ್ಲಾ ಅದ್ಭುತಗಳಿಗಿಂತ ದೊಡ್ಡ ಅದ್ಭುತವಾಗಿದೆ. ಅನೇಕರಿಗೆ ಈ ಪದ ಜೀರ್ಣಮಾಡಲಿಕ್ಕೆ ಆಗಲಿಕ್ಕಿಲ್ಲ. ಯಾಕೆಂದರೆ ಕೆಲವರ ಭಾವನೆ ಏನೆಂದರೆ ಒಂದು ಸಲ ಪಾಪಕ್ಕೆ ಪಶ್ಚಾತ್ತಾಪ ಪಟ್ಟು ಕರ್ತನಾದ ಯೇಸು ಕ್ರಿಸ್ತನನ್ನು ರಕ್ಷಕನು ಎಂದು ನಂಬಿಕರ್ತನಾದ ಯೇಸುಕ್ರಿಸ್ತನನ್ನು ತಮ್ಮ ಜೀವಿತದ ಒಡೆಯನಾಗಿ ಅಂಗೀಕರಿಸಿ ತಂದೆ, ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡ ನಂತರ ಹೇಗೆ ಬೇಕಾದರೂ ಜೀವಿಸಿದರೂ ಹೊಂದಿದ ರಕ್ಷಣೆಯನ್ನು ಕಳೆದುಕೊಳ್ಳುವುದಿಲ್ಲ ಎಂಬ ಹಗುರವಾದ ಭಾವನೆ ಅನೇಕರಲ್ಲಿ ಇದೆ. ಅದಕ್ಕಗಿ ಸಹೋದರರ ಅನ್ಯೋನ್ಯತೆಯನ್ನು ಅಸಡ್ಡೆ ಮಾಡಿ ಪರಿಶುದ್ಧತೆಯನ್ನು ಹಗೆ ಮಾಡಿ ಪಾಪದ ಹಾಗೂ ಲೋಕದ ಸುಖ ಭೋಗದ ಜೀವಿತವನ್ನು ಪ್ರೀತಿಸಿ ಜೀವಿಸುವಂಥ ಎಷ್ಟೋ ಜನರನ್ನು ಈ ದಿನಮಾನಗಳಲ್ಲಿ ನಾವು ಕಾಣಬಹುದು ಇದು ಅವರ ಆತ್ಮೀಕ ಜೀವಿತದ ಅವನತಿಗೆ ಕಾರಣವಾಗುತ್ತದೆ.

ಈ ಲೋಕದ ಅನೇಕ ದೇಶಗಳಿಗೆ ನಾನು ದೇವರ ಸೇವೆ ಮಾಡಲು ಹೋಗುವ ನಿಮಿತ್ತ ಕೇವಲ ತಲೆಯ ಜ್ಞಾನದಿಂದ ನಾನು ಇದನ್ನು ಹೇಳಲ್ಲ. ಅನೇಕ ವಿಧವಾದ ಅನುಭವದಿಂದ ಇದನ್ನು ನನಗೆ ಹೇಳಲು ಸಾಧ್ಯವಾಗಿದೆ.

ಲೋಕದಲ್ಲಿ ಎಷ್ಟೋ ಹೊಸದಾಗಿ ಹುಟ್ಟದಿ ಸಭೆಗಳು ಒಡೆಯಲ್ಪಡುತ್ತಾ ಇವೆ. ಅನೇಕ ಸಭೆಗಳಲ್ಲಿ ಭಿನ್ನಾಭಿಪ್ರಾಯಗಳು, ಪಾಪದಲ್ಲಿ ಜೀವಿಸುವಂಥ ಕ್ರೈಸ್ತ ವಿಶ್ವಾಸಿಗಳಿಗೆ ದೇವ ಸೇವಕರು

ನನ್ನ ಆತ್ಮವನ್ನು ನಿಮ್ಮಲ್ಲಿ ನೆಲೆಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು (ಯೆಹೆ. 36:27).

ತಿದ್ದು ಪಾಟು ಮಾಡುವ ಆಗಿಲ್ಲ ಒಂದು ವೇಳೆ ಹಾಗೇನಾದರೂ ಆದರೆ ಸಭೆಯಲ್ಲಿ ಸಮಸ್ಯೆಗಳನ್ನುಂಟು ಮಾಡುವುದು ಅಥವಾ ಸಭೆಗಳನ್ನು ಬಿಟ್ಟು ಹೋಗುವುದು, ಅಂಥವರನ್ನು ಯಾರು ಯಾಕೆ ನಿನ್ನ ಸಭೆಯನ್ನು ಬಿಟ್ಟು ಬಂದಿ, ನೀನು ಕ್ರಮಪಡಿಸಿಕೊಳ್ಳಬೇಕು ಎಂದು ಬುದ್ಧಿವಾದ ಹೇಳದೆ ಅಂಥ ದಾರಿ ತಪ್ಪಿದ ವಿಶ್ವಾಸಿಗಳನ್ನು ಅಂಗೀಕರಿಸುವ ಬೋಧಕರು ಆ ವಿಶ್ವಾಸಿಗಳು ಬಿಟ್ಟು ಬಿಟ್ಟು ಬಂದ ಸಭೆಯಲ್ಲಿ ನಡೆದ ಅದೇ ಸಮಸ್ಯಗಳು ತಮ್ಮ ಸಭೆಯಲ್ಲಿ ನಡೆದಾಗಲೇ ಎಚ್ಚೆತ್ತುಕೊಳ್ಳುವರು ಆಗ ಸಮಯ ದಾಡಿ ಹೋಗಿರುತ್ತದೆ. ಗಲಾತ್ಯ 5:9 ಸ್ವಲ್ಪ ಹುಳಿಯಿಂದ ಕಣಕವೆಲ್ಲಾ ಹುಳಿಯಾಗುವುದು.

ಇವತ್ತು ವಿಶ್ವಾಸದಲ್ಲಿರುವಂಥ ವಿಶ್ವಾಸಿ ನಾಳೆ ವಿಶ್ವಾಸದಲ್ಲಿ ಇರುವುದಿಲ್ಲ ಇವತ್ತಿನ ದಿನಮಾನಗಳಲ್ಲಿ ಅಧಿಕವಾದ ವಿಶ್ವಾಸಿಗಳು ಹಿಂಜಾರುವಿಕೆಯ ಜೀವಿತದಲ್ಲಿ ನಡೆಸುವುದನ್ನು ಕಾಣಬಹುದು.ದಾವೀದನು ಕೀರ್ತ 12:1 ರಲ್ಲಿ ಯೆಹೋವನೇ ರಕ್ಷಿಸು ಭಕ್ತರು ಮುಗಿದು ಹೋಗಿದ್ದಾರೆ. ಜನರೊಳಗೆ ನಂಬಿಕೆಯುಳ್ಳವರು ಕಾಣಿಸುವುದೇ ಇಲ್ಲಾ.

ಇದನ್ನು ಓದುತ್ತಿರುವಂಥ ದೇವಮಗುವೇ ಕರ್ತನಾದ ಯೇಸುಕ್ರಿಸ್ತನು ನಿನಗೆ ಒಂದೇ ಸಾರಿ ಕೊಟ್ಟಿರುವಂಥ ಅತೀ ಅಮೂಲ್ಯವಾದ ನಂಬಿಕೆಯನ್ನು ಲೋಕದ ಯಾವುದೇ ಸಂಗತಿಗಳ ನಿಮಿತ್ತವೂ, ಆಸ್ಥಿಪಾಸ್ತಿಯ ನಿಮಿತ್ತವೂ, ಕಷ್ಟ ಸಂಕಟಗಳ ನಿಮಿತ್ತವೂ ಹೆಣ್ಣಿನ, ಗಂಡಿನ ನಿಮಿತ್ತವೂ, ವ್ಯಭಿಚಾರದ ಸುಖ ಭೋಗದ ನಿಮಿತ್ತವೂ ಕಳಕೊಳ್ಳಬೇಡವೆಂದು ದೀನನಾಗಿ ನಿಮ್ಮ ಬಳಿ ವಿನಂತಿಸಿಕೊಳ್ಳತ್ತೇನೆ. ಲೋಕದ ಸುಖವು ಕ್ಷಣಿಕವಾದದ್ದು ಆದರೆ ಪರಲೋಕ ಸುಖವು ನಿರಂತರ ಇರುವಂತಹದ್ದು. ಯೊಹಾ 14:27 **"ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ ನನ್ನಲ್ಲಿರುವಂತ ಶಾಂತಿಯನ್ನು ನಿಮಗೆ ಕೊಡುತ್ತೇನೆ ಲೋಕವು ಕೊಡುವ ರೀತಿಯಲ್ಲಿ ನಾನು ನಿಮಗೆ ಕೊಡುವುದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಹೆದರದಿರಲಿ.** ಜ್ಞಾನೋ 23:23 **"ಸತ್ಯವನ್ನು ಎಂದರೆ ಜ್ಞಾನ ಸುಶಿಕ್ಷೆ ವಿವೇಕಗಳನ್ನು ಕೊಂಡುಕೋ ಮಾರಿ ಬಿಡಬೇಡ".**

ನಿನಗೆ ಸಿಕ್ಕಿದ ಆತ್ಮ ರಕ್ಷಣೆಯನ್ನು, ನಿನಗೆ ಸಿಕ್ಕಿದ ನಿತ್ಯ ಜೀವವನ್ನು, ನಿನಗೆ ಸಿಕ್ಕಿದ ಸೇವೆಯನ್ನು ಈ ಲೋಕದ ಯಾವುದೇ ಸಂಗತಿಗೆ ಹೋಲಿಸಲು ಸಾಧ್ಯವಿಲ್ಲ. ಕರ್ತನಾದ ಯೇಸುಕ್ರಿಸ್ತನು ಅಪೋಸ್ತಲನಾದ ಪೌಲನನ್ನು ಕರ್ತನಾದ ಯೇಸುಕ್ರಿಸ್ತನು ದಮಸ್ಕದ ದಾರಿಯಲ್ಲಿ ಸಂಧಿಸಿದಾಗ ಪೌಲನ ಮೊದಲ ಪ್ರಾರ್ಥನೆ ಅಪೋಸ್ತಲ ಕೃತ್ಯ 22:10 ಕರ್ತನೇ ನಾನೇನು ಮಾಡಬೇಕು. ಅಪೋಸ್ತಲ ಕೃತ್ಯ 9:5 ಕರ್ತನೇ ನೀನಾರು ಪ್ರತಿಯೊಬ್ಬ ವ್ಯಕ್ತಿಯ ಜೀವಿತದಲ್ಲಿ ತಿಳಿಯಬೇಕಾದ ಎರಡು ಸಂಗತಿಗಳು ಮೊದಲು ನಮ್ಮನ್ನು ಸೃಷ್ಟಿ ಮಾಡಿದ ಸೃಷ್ಟಿಕರ್ತನನ್ನು ಪಾಪದ ಶಿಕ್ಷೆಯಿಂದ ನಿತ್ಯ ನರಕದಿಂದ ತಪ್ಪಿಸುವ ರಕ್ಷಕನನ್ನು ತಿಳಿದು ಕೊಳ್ಳುವೆವು. ಎರಡನೆ ಸಂಗತಿ ನಮ್ಮ ಕುರಿತು ಕರ್ತನ ಚಿತ್ತವೇನು ಎಂದು ಅರಿತು ಕೊಳ್ಳುವುದು ಈ ಎರಡು ಸಂಗತಿ ಸಾಯುವುದಕ್ಕೆ ಮುನ್ನ ಒಬ್ಬ ವ್ಯಕ್ತಿ ಅರಿತು ಕೊಂಡರೆ ಆತನು ಧನ್ಯನು. ನಾನು ರಕ್ಷಣೆ ಹೊಂದಿದ ನಂತರ ಕಾಪಾಡಿಕೊಳ್ಳುವಂಥಹ ಜವಾಬ್ದಾರಿಕೆಯೂ ನಮ್ಮ ಮೇಲಿದೆ ಎಂದು ನಾವು ಮರೆಯ ಬಾರದು. ಒಂದು ಸಲ ರಕ್ಷಣೆ ಹೊಂದಿದ ವ್ಯಕ್ತಿ ತನ್ನ ರಕ್ಷಣೆಯನ್ನು ಕಾಪಾಡದೇ ಹೋದರೆ ಅದನ್ನು ಕಳಕೊಳ್ಳುವಂಥ ಭಯ ಕೂಡ ಇದೆ. ರಕ್ಷಣೆಯಲ್ಲಿ 3 ಅನುಭವ ಇದೆ. ರಕ್ಷಣೆ ಹೊಂದಿದ್ದೇವೆ. ರಕ್ಷಣೆ ಹೊಂದುತ್ತಿದ್ದೇವೆ. ಮತ್ತು ರಕ್ಷಣೆ ಹೊಂದುತ್ತೇವೆ. ಕೆಳಗಿನ ಕೆಲವು ವಚನಗಳು ರಕ್ಷಣೆ ಹೊಂದಿದವರು ನಂಬಿಕೆಯಲ್ಲಿ ನಿಲ್ಲದಿದ್ದರೆ ಕಳಕೊಳ್ಳುತ್ತಾರೆ. ಹಾಗೂ ರಕ್ಷಣೆ ಹೊಂದಿದವರು ಕೊನೆಯವರೆಗೂ ರಕ್ಷಣೆಯಲ್ಲಿ ನೆಲೆ ನಿಲ್ಲಬೇಕು ಎಂದು ತಿಳಿಸುತ್ತದೆ.

ಮತ್ತಾ 24:13 **"ಆದರೆ ಕಡೇವರೆಗೂ ತಾಳುವವನು ರಕ್ಷಣೆಹೊಂದುವನು".** ಮಾರ್ಕ 13:13 **" ಮತ್ತು ನನ್ನ ಹೆಸರಿನ ನಿಮಿತ್ತವಾಗಿ ನಿಮ್ಮನ್ನು ಎಲ್ಲರೂ ಹಗೆ ಮಾಡುವರು ಆದರೆ ಕಡೇವರೆಗೂ ತಾಳುವವನು ರಕ್ಷಣೆ ಹೊಂದುವನು."** ಮಾರ್ಕ 10: 29-31 " ನಿಮಗೆ ಸತ್ಯವಾಗಿ ಹೇಳುತ್ತೇನೆ ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ಮನೆಯನ್ನಾಗಲಿ ಅಣ್ಣ ತಮ್ಮಂದಿರನ್ನಾಗಲಿ, ಅಕ್ಕ ತಂಗಿಯರನ್ನಾಗಲಿ ಮಕ್ಕಳನ್ನಾಗಲಿ, ಭೂಮಿಯನ್ನಾಗಲಿ ಬಿಟ್ಟು ಬಿಟ್ಟಿರುವನೋ ಅವನಿಗೆ ಈಗಿನ ಕಾಲದಲ್ಲಿ ಮನೆ ಅಣ್ಣ ತಮ್ಮ ಅಕ್ಕ-ತಂಗಿ, ತಾಯಿ-ಮಕ್ಕಳು, ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತದೆ ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವದು ಆದರೆ ಬಹು ಮಂದಿ ಮೊದಲಿನವರು ಕಡೆಯುವರಾಗುವರು ಕಡೆಯವರು ಮೊದಲಿವನರಾಗುವರು ಎಂದು ಹೇಳಿದನು.

ಮುಂದುವರಿಯುವದು........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ (ಕೀರ್ತ. 34:19).

# ಯೌವನಸ್ಥರ ಸ್ವರ

ಕ್ರಿಸ್ತನಲ್ಲಿ ನನ್ನ ಪ್ರಿಯ ಸಹೋದರ ಸಹೋದರಿಯರಿಗೆ ನನ್ನ ಆತ್ಮೀಯ ವಂದನೆಗಳು.

ಪವಿತ್ರಾತ್ಮನೊಂದಿಗೆ ನಡೆಯ ಕುರಿತಾಗಿ ನಾವು ಹಿಂದಿನ ಸಂಚಿಕೆಯಲ್ಲಿ ನೋಡಿದೆವು. ಪವಿತ್ರಾತ್ಮನೊಂದಿಗೆ ನಡೆಯುವವರು ಯಾವಗಲೂ ಸ್ತುತಿ ಮಾಡುವವರು, ಆರಾಧಿಸುವವರು ಮತ್ತು ದೇವರ ವಾಕ್ಯವನುಸಾರವಾಗಿ ನಡೆಯುವವರಾಗಿರುತ್ತಾರೆ. ದೇವರ ವಾಕ್ಯ ಹೇಳುವ ಪ್ರಕಾರ ಕೀರ್ತನೆ 50:23, **"ಯಾರು ಸ್ತುತಿ ಯಜ್ಞವನ್ನು ಸಮರ್ಪಿಸುತ್ತಾರೋ ಅವರೇ ನನ್ನನ್ನು ಗೌರವಿಸುವರು. ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳುವವರಿಗೆ ನನ್ನ ವಿಶೇಷ ರಕ್ಷಣೆಯನ್ನು ತೋರಿಸುವೆನು"** ಎಂಬುದಾಗಿ ನೋಡುತ್ತೇವೆ. ಸ್ತುತಿಸುವಂತಹ ನಾವು ದೇವರನ್ನು ಗೌರವಿಸುತ್ತೇವೆ.

ಒಬ್ಬ ಹಾಡುಗಾರನು ಹೇಳುವ ಪ್ರಕಾರ, ಸ್ತುತಿಸುವ ನಮಗೆ ಸೋಲೇ ಇಲ್ಲ, ಜಯವು ನಿಶ್ಚಯವೇ. 2ಥೆಸ 5:18ರಲ್ಲಿ ನಾವು ನೋಡುವಂತೆ, ಎಲ್ಲಾದರಲ್ಲಿಯೂ ಕೃತಜ್ಞತ ಸ್ತುತಿ ಮಾಡಿರಿ. ಇದೇ ನಿಮ್ಮ ವಿಷಯವಾಗಿ ಕ್ರಿಸ್ತಯೇಸುವಿನಲ್ಲಿ ತೋರಿಬಂದ ದೇವರ ಚಿತ್ತ. ನಾವು ಮಾಡುವಂತಹ ಸ್ತುತಿಯು ಅದು ದೇವರ ಚಿತ್ತವಾಗಿದೆ. ದೇವರ ಚಿತ್ತವನ್ನು ನಾವು ನೆರವೇರಿಸುವಂತಹ ಮಕ್ಕಳಾಗಿರುವುದಾದರೆ ದೇವರು ನಮ್ಮನ್ನು ಸಕಲ ವಿಷಯದಲ್ಲಿ ಮುನ್ನಡೆಸುವವನಾಗಿದ್ದಾನೆ.

ಅದೇ ರೀತಿಯಲ್ಲಿ ಮತ್ತೊಂದು ಹಾಡುಗಾರನು ಹೇಳುವ ಪ್ರಕಾರ, ಆರಾಧನೆ ವೀರನಿಗೆ ಪ್ರೋಮೊಷನ್ (promotion) ನಿಶ್ಚಯ. ಆರಾಧನೆಯು ಒಂದು ಹಾಡಾಗಿರದೆ, ಅದು ನಮ್ಮನ್ನೇ ನಾವು ದೇವರಿಗೆ ಸಮರ್ಪಿಸುವಂತದ್ದಾಗಿದೆ. ನಾವು ಮಾಡುವಂತಹ ಎಲ್ಲಾ ಸೇವೆಗಳು ಈ ಲೋಕಕ್ಕೆ ಸೀಮಿತವಾಗಿರುವುದು ಮತ್ತು ಈ ಲೋಕದಲ್ಲೇ ಕೊನೆಯಾಗುವದು. ಆದರೆ, ಆರಾಧನೆಯು ಸದಾಕಾಲ ಇರುವಂಥದ್ದಾಗಿದೆ. ದೇವರ ಪ್ರಸನ್ನತೆಯನ್ನು ಅನುಭವಿಸುವಾಗಲೆಲ್ಲಾ ನಾವು ದೇವರೊಂದಿಗೆ ನಡೆಯುವವರಾಗಿದ್ದೇವೆ.

ಸ್ತುತಿ ಮಾಡುತ್ತಾ, ಸ್ತುತಿಯ ಹಾಡುಗಳನ್ನು ಹಾಡುತ್ತಾ, ದೇವರನ್ನು ಹಾಡಿ ಕೊಂಡಾಡಿ, ನಾವು ದೇವರನ್ನು ಆರಾಧಿಸತ್ತಾ ಆತನ ಪ್ರಸನ್ನತೆಯನ್ನು ಅನುಭವಿಸುತ್ತೇವೆ. ಆ ಸಮಯದಲ್ಲಿ ನಮ್ಮ ಕಣ್ಣುಗಳಲ್ಲಿ ಆನಂದ ಬಾಷ್ಪ ವರ್ಣಿಸಲು ಅಸಾಧ್ಯವಾದಂತ ಅನುಭವ. ನಾವು ದೇವರ ಪ್ರಸನ್ನತೆಯನ್ನು ಅನುಭವಿಸುತ್ತಾ ದೇವರ ಮುಂದೆ ಸಾಷ್ಟಾಂಗ ಎರಗುತ್ತೇವೆ. ನಮ್ಮ ಅಪ್ಪರು ನಮ್ಮನ್ನು ಅಪ್ಪಿಕೊಂಡು ಸಂತೈಸಿದ ಹಾಗೆ ಅಥವಾ ಅದಕ್ಕಿಂತ ಹೆಚ್ಚಾದ ಅನುಭವವನ್ನು ಹೊಂದುತ್ತೇವೆ. ಯಾಕೆಂದರೆ ನಮ್ಮ ಸೃಷ್ಟಿಕರ್ತ ಯೇಸು ನಮ್ಮ ಅಪ್ಪರಿಗಿಂತಲೂ ಅಪ್ಪನಾಗಿದ್ದಾನೆ.

ನನ್ನ ಪ್ರಿಯ ಸಹೋದರ – ಸಹೋದರಿಯೇ, ನಮ್ಮ ಎಲ್ಲಾ ಕಾರ್ಯಗಳ ಮಧ್ಯದಲ್ಲಿ ನಮ್ಮ ಜೀವಿತ ಅವಧಿಯಲ್ಲಿ ಎಷ್ಟು ಕಾಲ, ಎಷ್ಟು ಸಮಯ ನಾವು ದೇವರೊಂದಿಗೆ ನಡೆಯುತ್ತೇವೋ ಅಷ್ಟು ಸನಿಹದಲ್ಲಿ ನಾವು ದೇವರನ್ನು ಕಾಣಬಹುದು ಮತ್ತು ದೇವರ ಪ್ರಸನ್ನತೆಯನ್ನು ಅನುಭವಿಸಬಹುದಾಗಿದೆ. ಇಂದೇ ನೀವು ದೇವರ ಜೊತೆ ಇರುವುದಕ್ಕೆ ತೀರ್ಮಾನ ಮಾಡುವುದಾದರೆ, ರೋಮಾ 12:1,2 ಹೇಳುವ ಹಾಗೆ, **"ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು"**.

ದೇವರ ಆಸೆ ಮತ್ತು ನನ್ನ ಆಸೆ, ನಾವು ಆತನ ಪ್ರಸನ್ನತೆಯನ್ನು ಅನುಭವಿಸುವಂತಹ ಮಕ್ಕಳಾಗಬೇಕೆಂಬುದೇ. ನಿಮ್ಮ ಜೀವಿತ ದೇವರಿಗೆ ಮೀಸಲಾಗಿಟ್ಟಾಗ ನಿಮ್ಮ ಎಲ್ಲ ಪ್ರಶ್ನೆಗಳಿಗೆ, ತೊಂದರೆಗಳಿಗೆ ನೀವು ಚಿಂತಿತರಾಗಬೇಕಿಲ್ಲ. ದೇವರೇ ಎಲ್ಲವನ್ನು ಆತನ ಚಿತ್ತಾನುಸಾರವಾಗಿ ನಮ್ಮ ಜೀವಿತದಲ್ಲಿ ಮಾಡುವಾತನಾಗಿದ್ದಾನೆ. ಈ ಸಂಚಿಕೆಯನ್ನು ಓದಿದಂತಹ ನಿಮ್ಮಲ್ಲಿ ದೇವರು ಬಲವಾದ ಕಾರ್ಯವನ್ನು ಮಾಡಿದ್ದಾನೆಂದು ನಂಬಿದ್ದೇನೆ ಮತ್ತು ನಂಬುತ್ತೇನೆ. ದೇವರು ನಿಮ್ಮನ್ನು ಶುದ್ದತೆಯಿಂದ ಪರಿಶುದ್ದತೆಗೆ, ಪರಿಶುದ್ದತೆಯಿಂದ ಅತೀ ಪರಿಶುದ್ದತೆಗೆ ನಡೆಸಲಿ ಎಂದು ನಿಮಗಾಗಿ ನಾನು ಪ್ರಾರ್ಥಿಸುವವನಾಗಿದ್ದೇನೆ.

ನಿಮ್ಮ ಪ್ರಾರ್ಥನೆಯಲ್ಲಿ ನನ್ನನ್ನು ಹೆಚ್ಚೆಚ್ಚಾಗಿ ನೆನಪು ಮಾಡಿಕೊಂಡು ಕರ್ತನಲ್ಲಿ ಪ್ರಾರ್ಥಿಸಲು ನಿಮ್ಮನ್ನು ಪ್ರೀತಿಯಿಂದ ಕೇಳಿಕೊಳ್ಳುತ್ತೇನೆ. ಯೌವನಸ್ಥರ ಮಧ್ಯದಲ್ಲಿ ದೇವರು ಇನ್ನು

ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು, ಬಹು ದಿನದ ಮೇಲೆ ಅದು ನಿನಗೆ ಸಿಕ್ಕವದು (ಪ್ರಸ. 11:1).

ಬಲವಾದ ಕಾರ್ಯಮಾಡಿ ತನ್ನ ರಾಜ್ಯದಲ್ಲಿ ಸೇರಿಸಿಕೊಳ್ಳಲು, ನನ್ನನ್ನು ಮತ್ತು ನನ್ನ ಕುಟುಂಬವನ್ನು ಉಪಯೋಗಿಸಲು ಮಾತ್ರವಲ್ಲದೇ ದೇವರು ತನ್ನ ವಾಕ್ಯದ ಪ್ರಕಟಣೆಯನ್ನು ಮತ್ತು ತನ್ನನ್ನು ತೋರ್ಪಡಿಸಲು ಹಾಗೂ ದೇವರ ಸ್ವರದ ಎಲ್ಲ ಸಂಚಿಕೆಯಲ್ಲಿ ಅನೇಕ ಆತ್ಮೀಕ ಸತ್ಯಗಳು ಹೊರಪಡಲು ಪ್ರಾರ್ಥಿಸಿರಿ.

ನಿಮ್ಮ ಸಲಹೆ – ಸೂಚನೆ ಮತ್ತು ಅಭಿಪ್ರಾಯಗಳಿಗಾಗಿ ದೇವರ ಸ್ವರ ಸಂಪಾದಕರಿಗೆ ಪತ್ರ ಬರೆಯಿರಿ ಅಥವಾ jsma2j@gmail.comಗೆ ಇ–ಮೇಲ್ ಕಳುಹಿಸಿ. ಫೇಸ್‌ಬುಕ್(facebook) ನಲ್ಲಿ ಹಿಂಬಾಲಿಸಲು www.facebook.com/jsmonteiro ಕ್ಲಿಕ್ ಮಾಡಿರಿ.

ಕರ್ತನಲ್ಲಿ ನಿಮ್ಮವ,

**ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

---

**ಆರೋಗ್ಯ ಸ್ವರ**

## ಚರ್ಮದಲ್ಲಿ ಜಿಡ್ಡಿನಂಶ ಇದ್ದರೆ

8–10 ಹನಿ ಶುದ್ಧ ಗುಲಾಬಿ ಜಲವನ್ನು 4 ಚಮಚ ಐಸ್ ನೀರಿಗೆ ಬೆರೆಸಿ ಹತ್ತಿಯ ಉಂಡೆಯಿಂದ ಮುಖ ಲೇಪಿಸಿ ಮೃದುವಾಗಿ ತಿಕ್ಕಿದರೆ ತೈಲಾಂಶ ನಿವಾರಣೆಯಾಗಿ ಮೊಗ ಶುಭ್ರವಾಗಿ, ತಾಜಾ ಆಗಿ ಹೊಳೆಯುತ್ತದೆ.

* ಸಮ ಪ್ರಮಾಣದಲ್ಲಿ ಟೊಮೊಟೋ ರಸ ಮತ್ತು ಸೌತೆ ರಸ ಬೆರೆಸಿ ಮುಖಕ್ಕೆ ಲೇಪಿಸಿ, ಮೃದುವಾಗಿ ತಿಕ್ಕಿ 15 ನಿಮಿಷದ ಬಳಿಕ ತೊಳೆದರೆ ತೈಲಮಯ ತ್ವಚೆಯಲ್ಲಿ ಪರಿಣಾಮಕಾರಿ ಬದಲಾವಣೆ. ಸ್ವಲ್ಪ ಮಂಜು ನೀರಲ್ಲಿ ನಾಲ್ಕಾರು ಹನಿ ನಿಂಬೆರಸ ಬೆರೆಸಿ ಮುಖ, ಕತ್ತು ತೊಳೆದರೆ ಜಿಡ್ಡು ನಿವಾರಕ, ಕಾಂತಿಕಾರಕ.

* ತೈಲಮಯ ತ್ವಚೆಯವರು ಬಿಸಿಲಿನಲ್ಲಿ ಹೊರಹೋಗುವ ಮೊದಲು ಸ್ವಲ್ಪ ತಾಜಾ ಮಜ್ಜಿಗೆಯಿಂದ ಮುಖ ಮತ್ತು ಕತ್ತಿನ ಭಾಗ, ಕೈಕಾಲುಗಳನ್ನು ಮಾಲೀಶು ಮಾಡಿ ತೊಳೆದರೆ ಉತ್ತಮ.

* ಮೊಟ್ಟೆಯ ಬಿಳಿ ಭಾಗ (ಹಳದಿ ಭಾಗ ಸಲ್ಲದು) 1–2 ಚಮಚದಷ್ಟು ತೆಗೆದು ಚೆನ್ನಾಗಿ ಪೇಸ್ಟ್ ಮಾಡಿ ಮುಖಕ್ಕೆ ಲೇಪಿಸಿ 15 ನಿಮಿಷದ ಬಳಿಕ ಕಡಲೆ ಹಿಟ್ಟಿನಿಂದ ಮುಖ ತೊಳೆದರೆ ಜಿಡ್ಡುಕಳೆದು ಮುಖ ಶುಭ್ರವಾಗಿ ಹೊಳೆಯುತ್ತದೆ. ಇದನ್ನು ಕಣ್ಣಿನ ಸುತ್ತ ಲೇಪಿಸಕೂಡದು.

* ಅಧಿಕ ಜಿಡ್ಡಿನಂಶ ಇರುವವರು ಪುದೀನಾ ರಸ ಮತ್ತು ರೋಸ್ ವಾಟರ್ (ಶುದ್ಧ ಗುಲಾಬಿಜಲ) ಬೆರೆಸಿ ಮುಖಕ್ಕೆ ಲೇಪಿಸಿ 10 ನಿಮಿಷದ ಬಳಿಕ ಐಸ್ ನೀರಿನಿಂದ ಮುಖ ತೊಳೆಯಬೇಕು. ಹೀಗೆ ದಿನಕ್ಕೆ 2–3 ಬಾರಿ ಮಾಡಿದರೆ ಚರ್ಮದಲ್ಲಿ ತೈಲಾಂಶದ ಸಮತೋಲನ ಆಗಿ ಮುಖದ ಅಂದ ಹೆಚ್ಚುತ್ತದೆ.

## ಕೊಲೆಸ್ಟರಾಲ್ ನಿಯಂತ್ರಣಕ್ಕಾಗಿ

* ಮೆಂತ್ಯೆಯನ್ನು ಹುರಿದು ಪುಡಿ ಮಾಡಿ ಬೆಳಗ್ಗೆ ಅಥವಾ ಮಧ್ಯಾಹ್ನ ಆಹಾರಕ್ಕೆ ಮೊದಲು ಬಿಸಿನೀರಿನಲ್ಲಿ ಅಥವಾ ಮಜ್ಜಿಗೆಯಲ್ಲಿ ಕದಡಿ ಕೊಡಿ. ಪ್ರಮಾಣ 1/2–ಒಂದುವರೆ ಚಮಚ.

* ಬೆಳ್ಳುಳ್ಳಿಯನ್ನು ಕಾವಲಿಯಲ್ಲಿ ಎಣ್ಣೆ ಹಾಕದೇ ಹುರಿದಿಡಿ. ದಿನಕ್ಕೆ 4–6 ಬೆಳ್ಳುಳ್ಳಿಯ ಸೇವನೆ ಹಿತಕರ.

* ನಿತ್ಯ 1 ಲೋಟ ಸಕ್ಕರೆ ರಹಿತ ಜೇನು ಮಿಶ್ರಿತ ಕರಬೂಜದ ಜ್ಯೂಸ್ ನೀಡಿರಿ.

* ಒಂದು ಲೋಟ ಬಿಸಿ ನೀರಿನಲ್ಲಿ ಒಂದೆರೆಡು ಇಂಚು ದಾಲ್ಚೀನಿಯನ್ನು ಹುಡಿ ಮಾಡಿ ಹಾಕಿ. ದಿನಕ್ಕೆ 2 ಬಾರಿ ಅರ್ಧ ಲೋಟದಂತೆ ಈ ನೀರನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸಲು ಕೊಡಿ.

* ಕರಿಬೇವನ್ನು ಮತ್ತು ಹುರುಳಿಯನ್ನು ಹುರಿದು ಹುಡಿ ಮಾಡಿ ಖಾರ ಉಪ್ಪು ಸೇರಿ ಚಟ್ನಿಪುಡಿಯನ್ನು ತಯಾರಿಸಿ ಇದನ್ನು ನಿತ್ಯ 2–4 ಚಮಚ ಆಹಾರದ ಜೊತೆ ಸೇವಿಸಿ.

* ಅಧಿಕ ನೀರಿನ ಸೇವನೆ ಹಿತಕರ, ಬಿಸಿನೀರು ಹಿತಕರ.

* ವಿವಿಧ ಬಗೆಯ ಸೊಪ್ಪು ಹಸಿರು ತರಕಾರಿಯಲ್ಲಿನ ಸೆಲ್ಯುಲೋಸ್ ಕೊಲೆಸ್ಟರಾಲ್‌ನ ಮಟ್ಟ ಕಡಿಮೆ ಮಾಡಲು ಸಹಕಾರಿ.

– ಸಂಗ್ರಹ.

ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರಸಿಬಿಡುವನು
(ಯೆಶಾ. 25:8).

# ಜಾಹಿರಾತು


ನಿಮಗೆ ಶಾಲೆಯ ಯೂನಿಫಾರಂ ಮತ್ತು ದೇವರ ವಾಕ್ಯದ ಟಿ-ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ **Accountant** ಬೇಕಾಗಿದ್ದಾರೆ

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0820–2002781, 9902334941.**

## ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ. ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು. ಪ್ರಾರ್ಥನೆ ಮಾಡಲು ಇಚ್ಛಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941.**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**


ಬಡವರಿಗೆ ದಾನಮಾಡುವವನು ಕೊರತೆಪಡನು

(ಜ್ಞಾನೋ. 28:27).

## ಈ ವಾಕ್ಯಗಳು ಎಲ್ಲಿವೆ?

ಮಕ್ಕಳ ಸ್ವರ

1) ಯೇಸುಕ್ರಿಸ್ತನ ತಂದೆಯಾದ ಯೋಸೇಫನು ಯಾವ ಕೆಲಸ ಮಾಡುತ್ತಿದ್ದ ?
2) ಯೇಸುಕ್ರಿಸ್ತನು ಯಾವ ಸಮುದ್ರದ ಮೇಲೆ ನಡೆದನು?
3) ಹೇಬೆಲನು ಏನನ್ನು ಮಾಡುತ್ತಿದ್ದ?
4) ಸಿಂಹಗಳ ಗವಿಗಳೊಡನೆ ಯಾರನ್ನು ಹಾಕಿದರು?
5) ಅಬ್ರಹಾಮನು, ಸಾರಳು ತೀರಿಹೋದ ಮೇಲೆ ಯಾರನ್ನು ಮದುವೆಯಾದನು?
6) ಯೇಸುವಿನ ಶಿಷ್ಯರಾದ ಯಾಕೋಬ–ಯೋಹಾನರ ತಂದೆ ಯಾರು ?
7) ಸೃಷ್ಠಿ ಕ್ರಮದಲ್ಲಿ ಮರ–ಗಿಡಗಳನ್ನು ಎಷ್ಟನೇ ದಿನದಲ್ಲಿ ಉಂಟುಮಾಡಿದನು?
8) ದೇವರು ಯಾರೊಡನೆ ಮಾಡಿಕೊಂಡ ಒಡಂಬಡಿಕೆಗೆ ಮೇಘಗಳಲ್ಲಿ ಮುಗಿಲು ಬಿಲ್ಲು ಅಥವಾ ಕಾಮನ ಬಿಲ್ಲು ಕವಿಸುತ್ತದೆ?
9) ಸ್ನಾನಿಕನಾದ ಯೋಹಾನನ ತಂದೆಯ ಹೆಸರೇನು ?
10) ಇಸಾಕನ ಮಗನಾದ ಯಾಕೋಬನು ಯಾರ ಮಗಳನ್ನು ಮದುವೆಯಾದನು ?

---

### ಜೂನ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1) 930 ವರ್ಷ (ಆದಿ. 5:5).
2) ಬೆನಮ್ಮಿ (ಆದಿ. 19:38).
3) ಬೇರ್ಷೆಬದ ಅರಣ್ಯದಲ್ಲಿ (ಆದಿ. 21:14).
4) ಮೀರ್ಯಾಮಳು (ಅರಣ್ಯ. 12:8).
5) ಶೆಬಾ ದೇಶದ ರಾಣಿ (1 ಅರಸು. 10:1)
6) ಅನನೀಯನೆಂಬ ಶಿಷ್ಯನನ್ನು (ಅ.ಕೃ. 9:1&17).
7) ಚಲ್ಪಹಾದನ ಕುಮಾರ್ತೆಯರು (ಮಹ್ಲ, ನೋವಾ, ಹೊಗ್ಲಾ, ವಿಲ್ಕಾ, ತಿರ್ಚಾ) ಅರಣ್ಯ. 27:1–5.
8) ಸೈತಾನನು ಅಥವಾ ಲೂಸಿಫರನು.
9) ಬೆಳಕು (ಆದಿ. 1:3).
10) ಏಳನೇ ದಿನದಲ್ಲಿ (ಆದಿ. 2:2).

---

## ಡಿಜಿಎಮ್ ಬೇತೇಲ್ ಅಂಕಣ

- ಜೂನ್ ತಿಂಗಳಲ್ಲಿ ನಡೆದ 21 ದಿವಸದ ರಾತ್ರಿ ಪ್ರಾರ್ಥನಾ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು. ಈ ಕೂಟದಲ್ಲಿ ಅನೇಕ ದೇವಸೇವಕರುಗಳು ಬಂದು ಸೇವೆಯನ್ನು ಮಾಡಿದರು. ಈ ಕೂಟದಲ್ಲಿ ಅನೇಕರು ಭಾಗವಹಿಸಿ ದೇವರಿಂದ ಆಶೀರ್ವಾದಗಳನ್ನು ಹೊಂದಿದರು.

ನನ್ನ ಧರ್ಮವನ್ನು ಹತ್ತಿರಕ್ಕೆ ಬರಮಾಡುವೆನು, ಅದು ಇನ್ನು ದೂರವಾಗಿರದು,
ನನ್ನ ರಕ್ಷಣೆಯು ತಡವಾಗದು (ಯೆಶಾ. 46:13).